ತಾವು ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನು ಎರಡನೆಯದಾಗಿ ಹೇಳುವುದಾದರೆ, ನಮ್ಮ ಮಲೆನಾಡು ಜಿಲ್ಲೆಯಲ್ಲಿ ಆನೆಗಳ ಕಾಟ ಬಹಳವಾಗಿದೆ. ಭತ್ತದ ಗದ್ದೆಗೆ ನುಗ್ಗಿ ತಿಂದುಕೊಂಡು ಹೋಗುತ್ತವೆ. ಕಬ್ಬನ್ನು ತಿಂದು ಹೋಗುತ್ತವೆ. ಅವರಿಗೆ ಕಾಂಪನ್‌ಸೇಷನ್ ಏನು ಕೊಡುತ್ತೇವೆ. 10 ಸಾವಿರ ರೂಪಾಯಿಗಳ ಹಾನಿಯಾದರೆ 500 ರೂಪಾಯಿಗಳ ಕಾಂಪನ್‌ಸೇಷನ್ ಕೊಡುತ್ತೇವೆ. ಅದು ಬರುವುದಕ್ಕೆ ಸುಮಾರು ಎರಡು ವರ್ಷಗಳಾಗುತ್ತದೆ. ಹಾಗಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ವರಿಗೂ ಸಹ ಸಾಕಷ್ಟು ಹಣವನ್ನು ರಿಲೀಸ್ ಮಾಡಿ ತಕ್ಷಣ ಕಾಂಪನ್‌ಸೇಷನ್‌ನ್ನು ಕೊಡಬೇಕು. ಕಾಂಪನ್‌ಸೇಷನ್ ಪ್ರಮಾಣವನ್ನು ಸಾಕಷ್ಟು ಹೆಚ್ಚಿಸಬೇಕು. ರೈತರು ಬಹಳ ಕಷ್ಟದಲ್ಲಿದ್ದಾರೆ. ಅದನ್ನು ಸಹ ತಾವು ಗಮನಿಸಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಒಂದು ಬೆಳಗಾಂನಲ್ಲಿ ಆದಂತಹ ಘಟನೆಯ ಸಂದರ್ಭದಲ್ಲಿ ನಾನು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಒಂದು ಸೂಚನೆಯನ್ನು ಕೊಟ್ಟಿದ್ದೇನೆ. ಕಳೆದ ನಾಲ್ಕೈದು ವರ್ಷಗಳಲ್ಲಿ ಏನು ಆವರೇಜ್ ಈ ರೀತಿಯ ಘಟನೆಗಳಿಂದ ನಮ್ಮ ರೈತರಿಗೆ ಆಗಿರುವಂತಹ ನಷ್ಟದ ಏನು ವೆಚ್ಚಗಳಿದೆ, ಅದನ್ನು ಒಂದು ವಿವರವಾದ ವರದಿಯನ್ನು ಕೊಡುವುದಕ್ಕೆ ಹೇಳಿದ್ದೇನೆ. ಆ ಒಂದು ಗೈಡ್‌ಲೈನ್ ಇಟ್ಟುಕೊಂಡು ಸನ್ಮಾನ್ಯ ಖರ್ಗೆಯವರು ಹೇಳಿದ ಹಾಗೆ ರಾಜ್ಯ ಸರ್ಕಾರವೆ, ಇವತ್ತು ಅಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಇದಕ್ಕೆ ಕೊಡುವುದಕ್ಕೆ ಒಪ್ಪಿಗೆ ಇಲ್ಲವೆಂದು ಹೇಳಿ, ನಾವು ನಮ್ಮ ಜವಾಬ್ದಾರಿಯನ್ನು ಇವತ್ತು ನಾವು ನುಣುಚಿಕೊಳ್ಳುವುದಕ್ಕಿಂತ ಹೆಚ್ಚಾಗಿ, ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವೇ ಅಂತಹ ಕುಟುಂಬದ ರೈತರುಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಒಂದು ನೀತಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಪಡಿಸುವುದಕ್ಕೆ ಹಾಗೂ ಆ ಹಣವನ್ನು ಯಾವ ರೀತಿಯಾಗಿ ಕೊಡಬೇಕು ಎನ್ನುವುದರ ಬಗ್ಗೆ ತೀರ್ಮಾನ ಮಾಡಲಿಕ್ಕೆ ಬಯಸುತ್ತೇನೆ ಹಾಗೂ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ರಾಜೇಂದ್ರನ್‌ರವರೆ, ತಾವು 10 ನಿಮಿಷದೊಳಗಡೆ ಮಾತನಾಡಿ ಮುಗಿಸಿ.

(ಆ) ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಸೈನ್ಸ್ ಸಭಾಂಗಣದಲ್ಲಿ **ಭಯೋತ್ಪದಕರು ವಿಜ್ಞಾನಿಯವರನ್ನು ಗುಂಡಿಟ್ಟು ಕೊಂದಿರುವ** ಬಗ್ಗೆ.

ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಅವತ್ತು ಭಾಷಣ ಮಾಡುವಂತಹ ಟೈಮ್‌ನಲ್ಲಿ ತಮಗೆ ಗೊತ್ತಿದೆ, ಒಂದು ಸೈಂಟಿಸ್ಟ್ ಅವರಿಗೆ ಫೈರಿಂಗ್ ಮಾಡಿ ಅದರ ಬಗ್ಗೆ ನಮಗೆ ಇನ್ನೂ ಮಾಹಿತಿ ಗೊತ್ತಿಲ್ಲ. ಅದರ ಬಗ್ಗೆ ಬಹಳ ಸೂಕ್ಷ್ಮವಾಗಿ ಕೇಂದ್ರ ಮಂತ್ರಿಗಳು ಹೇಳಿದ್ದಾರೆ. ಜೊತೆಗೆ ಇಲ್ಲಿ ನಮ್ಮ ವಿಧಾನಸೌಧದಲ್ಲಿ ಆಲ್ ಪಾರ್ಟಿ ಲೀಡರ್ಸ್‌ನ್ನು ಕರೆದು ಚರ್ಚೆ ಮಾಡುವಂತಹ ಸಮಯದಲ್ಲಿ ಶ್ರೀಮಾನ್

ಧರ್ಮಸಿಂಗ್‌ರವರು ಇದ್ದರು. ಆ ಸಂದರ್ಭದಲ್ಲಿ there was trouble going to take place in Karnataka.

ಶ್ರೀ ವಾಟಾಳ್ ನಾಗರಾಜ್ : ಈಗ 7.30 ಗಂಟೆಯಾಯಿತು. ಇಷ್ಟೊಂದು ಧಾರಾಳವಾಗಿ ಸಮಯ ಕೊಡುತ್ತಿದ್ದೀರಿ. ಏನು ಸಮಾಚಾರ ಗೊತ್ತಾಗಲಿಲ್ಲ.

ಅಧ್ಯಕ್ಷರು : ಈಗ ಅರ್ಧ ಗಂಟೆ ಕಾಲಾವಧಿ ಚರ್ಚೆ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು. 7–30 ಗಂಟೆಯ ಬದಲು ನಾಳೆ ದಿವಸಕ್ಕೆ ಮುಂದಕ್ಕೆ ಹಾಕಿ.

ಅಧ್ಯಕ್ಷರು : ಇರಲಿ. ಈ ದಿನ ಸದನ ನಡೆಯುವ ಕೊನೆಯ ದಿನವಾಗಿದೆ. ಬಹಳ ಗಂಭೀರವಾದಂತಹ ವಿಚಾರಗಳು ಇದೆ. ಆ ಕಾರಣದಿಂದ.....

ಶ್ರೀ ವಾಟಾಳ್ ನಾಗರಾಜ್ : ನಾವು ವಸ್ತುಸ್ಥಿತಿಯನ್ನು ಹೇಳೋಣ.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರು ಮಾತನಾಡಲಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಕೊನೆಯ ದಿವಸವೆಂದು ಹೇಳಿ ಉದಾಸಿಯವರು ಬಿಲ್ ಇಂಟ್ರೆಡ್ಯೂಸ್ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇದೇನು ನನಗೆ ಅರ್ಥವಾಗುತ್ತಿಲ್ಲ. ಸದನವನ್ನು ಕತ್ತಲೆಯಲ್ಲಿಡುವುದು ಒಳ್ಳೆಯದಲ್ಲ.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರೆ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಇದು ಒಳ್ಳೆಯ ಸೂಚನೆಯಲ್ಲ.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರೆ ತಾವು ಮಾತನಾಡಿ. ಮುಗಿಸಿಬಿಡೋಣ.

(ಗೊಂದಲ)

ಶ್ರೀ ಎಸ್. ರಾಜೇಂದ್ರನ್ : Insecurity in Karnataka State ಅದು prove ಆಗಿದೆ. ದೆಹಲಿಯಿಂದ ಇಂಟಲಿಜೆನ್ಸಿ ರಿಪೋರ್ಟ್ ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ. There is going to be distrubance in the Karnataka. ಇಷ್ಟೆಲ್ಲಾ ಅರು ಪ್ರಿಕಾಷನ್‌ನ್ನು ಕೊಟ್ಟರು ಸಹ ನಮ್ಮ ರಾಜ್ಯದಲ್ಲಿ ಒಬ್ಬ ಸೈಂಟಿಸ್ಟ್ without any security ಕೊಲೆ ಮಾಡಿದ್ದಾರೆಂದರೆ it shows it is purely due to failure of Intelligence. There is no doubt. No excuse in this. ಇಂತಹವರ ಮೇಲೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು what action he is going to take? ಒಬ್ಬ ಸೈಂಟಿಸ್ಟ್‌ಗೆ ರಕ್ಷಣೆ ಕೊಡಲಿಲ್ಲವೆಂದರೆ ಕಾಮನ್ ಮ್ಯಾನ್‌ಗೆ ಹೇಗೆ ರಕ್ಷಣೆಯನ್ನು ಕೊಡುವುದಕ್ಕೆ ಆಗುತ್ತದೆ? ವಿಧಾನಸೌಧದ ಒಳಗಡೆ ಬರಬೇಕೆಂದರೆ, ಎಂಎಲ್‌ಎಗಳನ್ನು search ಮಾಡಬೇಕು. ಎಂಎಲ್‌ಎಗಳು ಏನೇನು ಮಾಡುತ್ತಾರೋ ಎಂದು ಇಲ್ಲಿ ಅವರನ್ನು ಸರ್ಚ್ ಮಾಡುವುದು. "ನೀವು ಈ ಗೇಟ್‌ನಲ್ಲಿ ಹೋಗಬೇಕು. ಇದನ್ನು ನಾವು ಮೆಟಲಿಂಗ್ ಟೆಸ್ಟ್‌ನಲ್ಲಿಟ್ಟಿದ್ದೇವೆ.

ನಿಮ್ಮ ಬ್ಯಾಗನ್ನು ತೋರಿಸಿ" ಇದನ್ನು ಎಂಎಲ್ಎಗಳಿಗೆ ಹೇಳಿರುವುದು. We are the people who are going to protect the public. We are the people who are questioning this is not happenning? Why this is happenning?

ಶ್ರೀ ಹೆಚ್.ಸಿ. ಬಾಲಕೃಷ್ಣ : ಸನ್ಮಾನ್ಯ ಅಧ್ಯಕ್ಷರೆ, ಆ ರೀತಿಯಾಗಿ ಯಾವ ಎಂಎಲ್ಎಗಳಿಗೆ ಮಾಡಿರುವುದಿಲ್ಲ. ಅವರ ಹಿಂದೆ ಬರುವಂತಹವರಿಗೆ ಈ ರೀತಿಯಾಗಿ ಮಾಡಿದ್ದಾರೆ. ಎಂಎಲ್ಎಗಳಿಗೆ ಆ ರೀತಿಯಾಗಿ ಮಾಡಿರುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್ : ನನಗೆ ಅರ್ಥವಾಗಿಲ್ಲ. ಇಷ್ಟೆಲ್ಲಾ ಆಗಿ ನಾವು ಕರ್ನಾಟಕ ರಾಜ್ಯವನ್ನು ಪೀಸ್‌ಫುಲ್ ಆಗಿ ಇಟ್ಟುಕೊಳ್ಳುತ್ತೇವೆ ಎಂದರೆ ಎಲ್ಲಿ ಪೀಸ್‌ಫುಲ್ ಆಗಿ ಇಟ್ಟಿದ್ದೀರಿ? ಸೈಂಟಿಸ್ಟ್‌ನ್ನು ಪೀಸ್ ಪೀಸ್ ಮಾಡಿಬಿಟ್ಟಿದ್ದಾರೆ. ಆಲ್ ಇಂಡಿಯಾ ಬೇಸ್‌ನಲ್ಲಿ ಬಂದು ಇಲ್ಲಿ ಮೀಟಿಂಗ್ ನಡೆಯುತ್ತಿದೆ. ಕಾನ್ಫರೆನ್ಸ್ ನಡೆಯುತ್ತಿದೆ ಎಂದರೆ ಪಕ್ಕದಲ್ಲಿಯೇ ಪೊಲೀಸ್ ಸ್ಟೇಷನ್ ಇದೆ. What security you have given? What force you have posted to give protection there? ಅದರ ಮುಂಚೆ ಚೈನಾ ಪ್ರೈಂಮಿನಿಸ್ಟರ್ ಅವರು ಬಂದಿರುವಂತಹ ಟೈಮ್‌ನಲ್ಲಿ ಸರ್ ಎಂದು ಹೋಗಿ ಅಲ್ಲಿ ಫ್ಲಾಗ್‌ನ್ನು ಹಾಯ್ಸ್ಟ ಮಾಡುತ್ತಾರೆ. ಅವರು ಮಿಷಿನ್ ಗನ್ ತೆಗೆದುಕೊಂಡು ಬಂದು ಹೊಡೆದಿದ್ದರೆ ಈ ದೇಶಕ್ಕೆ ಕೆಟ್ಟ ಹೆಸರು ಬರುತ್ತಿತ್ತು. ನಮ್ಮ ರಾಜ್ಯಕ್ಕೂ ಸಹ ಕೆಟ್ಟ ಹೆಸರು ಬರುತ್ತಿತ್ತು. ಅವತ್ತಿನಿಂದಲೂ ಪೊಲೀಸ್ ಇಂಟೆಲಿಜೆನ್ಸ್ ಫೇಲ್ಯೂರ್ ಆಗಿದೆ ತಾನೇ? ಅವರಿಗೆ ಪೊಲೀಸ್‌ನವರು ಸರಿಯಾದ ಪ್ರೊಟಕ್ಷನ್‌ನ್ನು ಕೊಟ್ಟಿಲ್ಲ ತಾನೇ? ಇಷ್ಟೆಲ್ಲಾ ತಮಗೆ ಗೊತ್ತಿದ್ದರೂ ಸಹ till today you have not taken action against any police officer. Therefore, I am bringing to the notice of the Chief Minsiter ಅಧಿಕಾರಿಗಳು ಏನು ಮಾಹಿತಿಯನ್ನು ಕೊಡುತ್ತಾರೋ, but, humanitasion ಆಗಿ ಕಾಮನ್ ಆಗಿ, ಜನರಲ್ ಆಗಿ, you think over it. It is our duty to protect our Chief Minister also. The Intelligence will keep quiet. ನಾಳೇ ದಿವಸ ಹೆಚ್ಚು ಕಡಿಮೆಯಾದ ಮೇಲೆ ಹೀಗೆ ಆಗಿದೆ, ಹೀಗೆ ಆಗಿದೆ ಎಂದು ಹೇಳಿಕೊಳ್ಳುವುದಕ್ಕಿಂತ Why Intelligence has failed? Where is the lacuna? Who is the cause? ಇಷ್ಟರವರೆಗೂ ಅದರ ಮೇಲೆ ಏನು ಗೊತ್ತಿಲ್ಲ. ಇದರ ಬಗ್ಗೆ ಒಬ್ಬರು ಸಹ ಸಿಕ್ಕಿಲ್ಲ. ಇದರಲ್ಲಿ ಒಬ್ಬರನ್ನು ಕೂಡ ಅರೆಸ್ಟ್ ಮಾಡಿರುವುದಿಲ್ಲ. ಏನು ಅರೆಸ್ಟ್ ಮಾಡಿದ್ದೇವೆಂದು ಪಟ್ಟಿಯನ್ನು ಕೊಟ್ಟಿದ್ದರೆ it is not crystal clear. It is not transparent. ಸುಮ್ಮನೆ ಜನ ಹೀಗೆ ಮಾಡಿದ್ದಾರೆ. ಹೀಗೆ ಮಾಡಿದ್ದಾರೆಂದರೆ, is it so easy? Totally you have failed in that aspect. ನಾಳೇ ಇನ್ನೊಂದು ಕಾನ್ಫರೆನ್ಸ್ ಮಾಡಬೇಕೆಂದರೆ, ಕರ್ನಾಟಕ ಎಂದರೆ ಬೇಡವೆಂದು ಅವರು ಹೇಳುತ್ತಾರೆ. Throughout India Karnataka is the peaceful State. No doubt. ಒಂದು ಕಾಲದಲ್ಲಿ ಇದ್ದು, ಈ ಕಾಲದಲ್ಲಿ

ಅದನ್ನು ಪುನಃ ಸರಿಪಡಿಸುತ್ತಿರೋ? Therefore, whatever may come, you must accept that Intelligence has failed in our State. What type of Intelligence you have given there?

ಒಬ್ಬ ಮಾನ್ಯ ಸದಸ್ಯರು : ನೀವು ಮಾತನಾಡುವ ತರ ಬಹಳ ತುಂಬಾ ಚೆನ್ನಾಗಿರುತ್ತದೆ. ಕನ್ನಡದಲ್ಲಿಯೇ ಮಾತನಾಡಿ. ನೀವು ಮಾತನಾಡುವುದನ್ನು ಕೇಳುವುದಕ್ಕೆ ತುಂಬಾ ಚೆನ್ನಾಗಿರುತ್ತದೆ.

ಶ್ರೀ ಎಸ್. ರಾಜೇಂದ್ರನ್ : ಇವರು ಚೆನ್ನಾಗಿ ಮಾತನಾಡುತ್ತಾರೆಂದು ಹೇಳುತ್ತಾರೆ. ಬೇರೆಯವರು ಚೆನ್ನಾಗಿ ಮಾತನಾಡುವುದಿಲ್ಲವೆಂದು ಹೇಳುತ್ತಾರೆ. ಇದು ಹೇಗಿದೆ ನೋಡಿ. No. This is very important subject. ನಮ್ಮ ಸಿಟಿ ಪೊಲೀಸ್‌ನವರು ಅವತ್ತು ಏನು ಮಾಡಿಕೊಂಡಿದ್ದರು? ಪಕ್ಕದಲ್ಲಿರುವಂತಹ ಪೊಲೀಸ್‌ನವರು ಏನು ಮಾಡುತ್ತಿದ್ದರು? ಸ್ಟೇಟ್ ಇಂಟಲಿಜೆನ್ಸಿಯವರು ಏನು ಮಾಡುತ್ತಿದ್ದರು? ಸೆಂಟ್ರಲ್ ಇಂಟಲಿಜೆನ್ಸಿಯಿಂದ ಮೆಸೆಜ್ ಬಂದರೂ you have not given protection for that Scientist. ಇನ್ನು ಫ್ಯೂಚರ್‌ನಲ್ಲಿ ಏನು ಮಾಡುತ್ತೀರಿ? How you are going to protect? Your Intelligence States these are all the protection we have given." ತಾವೇನು ಮೆನ್‌ಷನ್ ಮಾಡಿದ್ದೀರಿ. "ವಿಧಾನಸೌಧಕ್ಕೆ ಕೊಟ್ಟಿದ್ದೇವೆ. ವಿಕಾಸಸೌಧಕ್ಕೆ ಕೊಟ್ಟಿದ್ದೇವೆ". ಬರೀ ವಿಧಾನಸೌಧ ಮತ್ತು ವಿಕಾಸಸೌಧಕ್ಕೆ ಸೆಕ್ಯುರಿಟಿ ಕೊಟ್ಟಿಬಿಟ್ಟು ಇಡೀ ರಾಜ್ಯದಲ್ಲಿ ಇಂಟಲಿಜೆನ್ಸಿ ಹುಷಾರಾಗಿದ್ದೇವೆಂದು ಹೇಳಿದರೆ it is totally... not at all an effort which they have put in the State. ತಾವು ಕೊಟ್ಟಿದೀರಿ ಎಲ್ಲಿ? ವಿಧಾನಸೌಧ, ಅಂಬೇಡ್ಕರ್ ವೀದಿಯಲ್ಲಿ, ಪೊಲೀಸ್‌ನವರನ್ನು ಹಾಕಿ ಇಂಟಲಿಜೆನ್ಸಿ ಹುಷಾರಾಗಿದ್ದೇವೆಂದರೆ What about the other places? What is the protectionyou are going to give to common person? ಇಷ್ಟೆಲ್ಲಾ ತಮಗೆ ಗೊತ್ತಿದ್ದರೂ ತಾವು ಪೊಲೀಸ್‌ನವರು ಏನು ವರದಿಯನ್ನು ಬರೆದುಕೊಡುತ್ತಾರೋ "ನಾವು ಹೀಗೆ ಮಾಡಿದ್ದೇವೆ" ಎಂದು ಉತ್ತರವನ್ನು ಕೊಡಬಾರದು. You must take serious action on them. Who ever it may be. Whether No.1 or No.2 whoever the officers! Why they have failed. You must take serious action against them. ಇಷ್ಟನ್ನು ಹೇಳಿಕೊಂಡು other friends are going to talk. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜೇಂದ್ರನ್ ಅವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ತಾವು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಆ ದಿನ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅದೇನೆಂದರೆ ಇಂತಹ ಜನರನ್ನು ನಾವು

ಅರೆಸ್ಟ್ ಮಾಡಿದ್ದೇವೆ ಎಂದು. ಆದರೂ ಸಹ ನನ್ನ ಚಿಂತನೆ, ನನ್ನ ಕನ್‌ಸರ್ನ್ ಏನೆಂದರೆ ಇದುವರೆಗೂ ಮೇನ್ ಕಲ್ಪ್ರಿಟ್ ಯಾರು ಅವರು ಕೈಗೆ ಸಿಕ್ಕಿಲ್ಲ. ಮೇನ್ ಕಲ್ಪ್ರಿಟ್ ಯಾರು ಶೂಟ್ ಮಾಡಿದ ಅವನು ಇನ್ನು ಅರೆಸ್ಟ್ ಆಗಿಲ್ಲ. ನಾವು ಇನ್ನು ಪೇಪರ್‌ನಲ್ಲಿ ನೋಡುತ್ತಿದ್ದೇವೆ, ಕೇಳುತ್ತಿದ್ದೇವೆ ಮತ್ತು ಫೋಟೊದಲ್ಲಿ ನೋಡುತ್ತಿದ್ದೇವೆ, ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ನೋಡುತ್ತಿದ್ದೇವೆ ಯಾರನ್ನೋ ಹಿಡಿದುಕೊಂಡು ಬಂದು "ಇವನನ್ನು ಹಿಡಿದಿದ್ದೇವೆ, ಅವನನ್ನು ಅರೆಸ್ಟ್ ಮಾಡಿದ್ದೇವೆ" ಎಂದು ಹೇಳುತ್ತಿದ್ದಾರೆ. ಮೊನ್ನೆ ಗುಲ್ಬರ್ಗಾದಲ್ಲಿ ಕೂಡ ಯಾರೋ ಒಬ್ಬ ಅರೆಸ್ಟ್ ಆದನಲ್ಲ it was just a chance. ಅವನು ಎಲ್ಲೋ ಬಸ್‌ಸ್ಟಾಂಡ್‌ನಲ್ಲಿ ಸಿಕ್ಕಿದ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಮನವಿ ಮಾಡಿಕೊಳ್ಳುತ್ತೇನೆಂದರೆ, ವಾರಣಾಸಿಯಲ್ಲಿ ಏನು ಒಂದು ಘಟನೆಯಾಯಿತು, ಅಲ್ಲಿ ಪೊಲೀಸ್‌ನವರು ಮೇನ್ ಕಲ್ಪ್ರಿಟ್ ಸಿಕ್ಕಿದ್ದು, ಅವನನ್ನು ಅರೆಸ್ಟ್ ಮಾಡಿದ್ದಾರೆ. ಆದರೆ ಇಲ್ಲಿ ಯಾರು ಅಟ್ಯಾಕ್ ಮಾಡಿದರು ಆ ಮೇನ್ ಕಲ್ಪ್ರಿರಟ್ ಇನ್ನು ಏಕೆ ಸಿಕ್ಕಿಲ್ಲ. ಬೆಂಗಳೂರು ಸಿಟಿಯಲ್ಲಿ ಒಳ್ಳೆಯ ಪೊಲೀಸ್ ಕಮಿಷನರ್ ಇದ್ದಾರೆ. ಆದರೆ ಬೇರೆ ನೆಟ್‌ವರ್ಕ್ ಇದೆಯಲ್ಲ, ಆ ನೆಟ್‌ವರ್ಕ್‌ನಲ್ಲಿ ಕೋ–ಆರ್ಡಿನೇಷನ್ ಇಲ್ಲ. ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಇಂದಿನ ಸರ್ಕಾರ ಇರಬಹುದು ಹಿಂದಿನ ಸರ್ಕಾರಗಳು ಇರಬಹುದು ಪೊಲೀಸ್‌ನವರಲ್ಲಿ ವರ್ಚ್ಯುಯಲಿ ಸ್ಪ್ಲಿಟ್ ಇದೆ. ಮೂರರಿಂದ ನಾಲ್ಕು ಗ್ರೂಪ್ ಇವೆ. ಈ ಗ್ರೂಪ್ ನೋಡಿದರೆ ಆ ಗ್ರೂಪ್‌ಗೆ ಆಗುವುದಿಲ್ಲ. ಆ ಗ್ರೂಪ್‌ನವರಿಗೆ ಈ ಗ್ರೂಪ್‌ನವರು ಕಂಡರೆ ಆಗುವುದಿಲ್ಲ. ಅದೇ ರೀತಿ ಕಮಿಷನರ್ ಆಫೀಸ್ನಲ್ಲಿ 3 ರಿಂದ 4 ಗ್ರೂಪ್ ಡಿಜಿಪಿ ಹೆಡ್‌ಕ್ವಾಟ್ರಸ್ ಆಫೀಸ್ ಇದೆಯಲ್ಲ ಅಲ್ಲಿ ಇದೆ. ಅವರಲ್ಲಿ ಕೋ–ಆರ್ಡಿನೇಷನ್ ಸರಿ ಇಲ್ಲ. ನನ್ನ ಚಿಂತನೆ ಏನೆಂದರೆ ಈಗ 11ನೇ ತಾರೀಖು ಪ್ರಾಫೆಟ್ಸ್ ಬರ್ತ್‌ಡೇ ಫಂಕ್ಷನ್ ಇದೆ. ಇಡೀ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಹಾಗೂ ಟೌನ್‌ನಲ್ಲಿ ಒಂದು ಪ್ರೊಸೆಷನ್ ಆಗುತ್ತದೆ. ನಂತರ ಮಹಾವೀರ ಜಯಂತಿ ಬರುತ್ತದೆ. ಈ ರೀತಿ ರಿಲೇಜಿಯಸ್ ಫಂಕ್ಷನ್‌ಗಳು ಆದಾಗ, ಘಟನೆಗೆ ಸಂಬಂಧಪಟ್ಟಂತೆ ಮೇನ್ ಕಲ್ಪ್ರಿಟ್ ಅರೆಸ್ಟ್ ಆಗಿಲ್ಲವೆಂದರೆ ಪಬ್ಲಿಕ್‌ನಲ್ಲಿ ಕಾನ್ಫಿಡೆನ್ಸ್ ಹೇಗೆ ಬರುತ್ತದೆ? ಅದಕ್ಕೆ ಒಂದು ಟಾಸ್ಕ್‌ಫೋರ್ಸ್ ಮಾಡಬೇಕು. ಮೇನ್ ಕಲ್ಪ್ರಿಟ್ ಅನ್ನು ಇಷ್ಟೊತ್ತಿಗೆ ಅರೆಸ್ಟ್ ಮಾಡಿ ತೋರಿಸಬೇಕಾಗಿತ್ತು. ಮೇನ್ ಕಲ್ಪ್ರಿಟ್ ಅರೆಸ್ಟ್ ಆಗಿಲ್ಲವೆಂದರೆ ಏನು? ಬೆಂಗಳೂರು ಒಂದು ಕಡೆ ಐಟಿ:ಬಿಟಿ ಎಂದು ಫೇಮಸ್ ಆಗಿದೆ. ಮತ್ತೊಂದು ಕಡೆ ಆಂಧ್ರಪ್ರದೇಶದವರು ಓಡಿಬರುತ್ತಿದ್ದಾರೆ. ಆಂಧ್ರಪ್ರದೇಶದವರು ಐಟಿ:ಬಿಟಿ ನಲ್ಲಿ ಏಕೆ ಸಕ್ಸಸ್ ಆಗಿಲ್ಲವೆಂದರೆ ಇದಕ್ಕೆ ಮುಂಚೆ ಹೈದಾರಾಬಾದ್‌ನಲ್ಲಿ ನಕ್ಸಲೈಟ್ ಹಾವಳಿ ಇತ್ತು. ನಾವಿಲ್ಲಿ ಎಂಎಲ್‌ಎಗಳು ಆರಾಮಾಗಿ ಹೇಗೆ ಓಡಾಡುತ್ತೇವಲ್ಲ. ಆ ರೀತಿ ಅಲ್ಲಿ ಎಂಎಲ್‌ಎಗಳು ಓಡಾಡುವುದಕ್ಕೆ ಆಗುವುದಿಲ್ಲ. ಎಕ್ಸ್ ಎಂಎಲ್‌ಎ ಕೂಡ ಅಲ್ಲಿ ಓಡಾಡುವುದಕ್ಕಾಗುವುದಿಲ್ಲ. ಆದರೆ ಇಲ್ಲಿ ನಾವು ಮಿನಿಸ್ಟರ್ ಅಥವಾ ಎಕ್ಸ್ ಮಿನಿಸ್ಟರ್

ಆಗಲಿ ಸಾಯಂಕಾಲದ ಹೊತ್ತು ಎಲ್ಲಿ ಹೋದರೂ ನಾವು ದೇವರ ಆಶೀರ್ವಾದದಿಂದ ಬಹಳ ನೆಮ್ಮದಿಯಾಗಿ ಕರ್ನಾಟಕದಲ್ಲಿ ಓಡಾಡುತ್ತೇವೆ. ಆದರೆ ಹೈದರಾಬಾದ್‌ನಲ್ಲಿ ಒಬ್ಬ ಮಾಜಿ ಶಾಸಕ ಕೂಡ ಓಡಾಡುವುದಕ್ಕಾಗುವುದಿಲ್ಲ. ಅವನಿಗೆ ಒಬ್ಬ ಸ್ಟನ್‌ಗನ್ ಇಟ್ಟುಕೊಂಡು ಒಬ್ಬ ಸೆಕ್ಯುರಿಟಿ ಇಟ್ಟುಕೊಂಡು ಓಡಾಡುತ್ತಾನೆ. ಏಕೆಂದರೆ ಅಲ್ಲಿ ನಕ್ಸಲೈಟ್ ಹಾವಳಿ ಇದೆ. Because of that law and order problem. ಹೈದಾರಾಬಾದ್‌ನಲ್ಲಿ ಜಾಸ್ತಿ ಐಟಿ:ಬಿಟಿ ಗ್ರೂಪ್ ಆಗಿಲ್ಲ. ಬೆಂಗಳೂರು ನಗರ ಒಂದು ಫೀಸ್‌ಫುಲ್ ಪ್ಲೇಸ್ ಎಂದು ಹೇಳಿ climate ಹಾಗೂ ಅಟ್‌ಮಾಸ್ಪಿಯರ್ ಚೆನ್ನಾಗಿ ಇದೆಯೆಂದು ಹೇಳಿ ಜಾಸ್ತಿ ಜನ ಬರುತ್ತಾರೆ. ಇಲ್ಲಿ ಕೂಡ ಅಂತಹ ಘಟನೆಗಳಾಗಿ ಇಂತಹ ಒಂದು ವಾತಾವರಣವಾದರೆ ಮುಂದೆ ಈ ರಾಜ್ಯ ಹಾಗೂ ಈ ಸಿಟಿಗೆ ಕೂಡ ಪರಿಣಾಮವಾಗುತ್ತದೆ. ಅದಕ್ಕೆ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ವಿಚಾರದಲ್ಲಿ ತಾವು ಬಹಳ ಸೀರಿಯಸ್ಸಾಗಿ ಇರಬೇಕು. ಅಧಿಕಾರಿಗಳು ಕಿವಿಯಲ್ಲಿ ಒಂದು ಹೀಗಾಯಿತು, ಅವರನ್ನು ಅರೆಸ್ಟ್ ಮಾಡಿದ್ದೀರಿ, ಟ್ರೇಸ್ ಮಾಡುತ್ತಿದ್ದೇವೆ, ಅಲ್ಲಿ ಹೋಗಿದ್ದೇವೆ, ಲಕ್ನೋಗೆ ಹೋಗಿದ್ದೇವೆ, ಡೆಲ್ಲಿಗೆ ಹೋಗಿದ್ದೇವೆ, ಬಾಂಬೆಗೆ ಹೋಗಿದ್ದೇವೆ ಎಂದು ಮಜಾ ಮಾಡುವುದಕ್ಕೆ ಹೋಗುವುದು. ಏನು ರಿಪೋರ್ಟ್ ತೆಗೆದುಕೊಂಡು ಬಂದಿದ್ದಾರೆ?

ಅಧ್ಯಕ್ಷರು : ನೀವು ಗೃಹ ಮಂತ್ರಿಗಳಾಗಿದ್ದಿರಲ್ಲ ಅದರ ಅನುಭವದಿಂದ ಹೇಳುತ್ತಿದ್ದೀರಾ? ಹಾಗೆ ಅವರು ಯಾವ ರೀತಿ ಮಾಡುತ್ತಾರೆ ಎಂದು ಹೇಳುತ್ತಿದ್ದೀರಾ?

ಶ್ರೀ ಆರ್. ರೋಷನ್ ಬೇಗ್ : ಹೌದು. ನನಗೆ ಅನುಭವ ಇದೆ. ಅದಕ್ಕೆ ಹೇಳುತ್ತಿರುವುದು. ಇದರ ಬಗ್ಗೆ ಇನ್ನು ಸರ್ಕಾರ ಸೀರಿಯಸ್ಸಾಗಿ ತೆಗೆದುಕೊಂಡಿಲ್ಲ. ಈಗ ಕರ್ನಾಟಕದಲ್ಲಿ ಒಬ್ಬರು ಯಂಗ್ ಚೀಫ್ ಮಿನಿಸ್ಟರ್ ಆಗಿದ್ದಾರೆ. ಕರ್ನಾಟಕದಲ್ಲಿ ಯಂಗ್ ಚೀಫ್ ಮಿನಿಸ್ಟರ್ ಆಗಿ ಇಂತಹ ಘಟನೆಗಳು ಆಗಬಾರದು. ಇಂತಹ ಘಟನೆಗಳಿಗೆ ಕಾರಣರಾದ ಆರೋಪಿಗಳನ್ನು ತಕ್ಷಣ ಅರೆಸ್ಟ್ ಮಾಡಿ. ಇಡೀ ರಾಜ್ಯಕ್ಕೆ ಒಂದು ಕಾನ್ಫಿಡೆನ್ಸ್ ಕೊಡಿ. ಆಗ ಇನ್‌ವೆಸ್ಟರ್ಸ್ ಕೂಡ ಈ ರಾಜ್ಯಕ್ಕೆ ಆರಾಮಾಗಿ ಬರುತ್ತಾರೆ. ಈ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ನಾವು ಅವತ್ತು ಪ್ರಸ್ತಾಪ ಮಾಡಿದೆವು. ಇಲಿ ಬಹಳ ಮುಖ್ಯವಾಗಿ ಎರಡು ಅಂಶಗಳನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕಾಗುತ್ತದೆ. ನಮಗೆ, ಈ ಸರ್ಕಾರ ಅಧಿಕಾರಕ್ಕೆ ಬಂದು ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಒಂದು ನಿರೀಕ್ಷೆ ಇತ್ತು. ಅದೇನೆಂದರೆ ಬೇರೆ ಮುಖ್ಯಮಂತ್ರಿಗಳ ತರಹ ಆಫೀಸರ್‌ಗಳು ಹೇಳಿದ್ದನ್ನೆ ಇವರು ಹೇಳುವುದಿಲ್ಲ. ಇವರು ಸ್ವಂತವಾಗಿ he will apply his brain and mind ಎಂದು ಅಂದುಕೊಂಡಿದ್ದೆವು. ಆದರೆ ಆ ಸೂಚನೆ ನನಗಂತೂ ಕಾಣಲೇ ಇಲ್ಲ. ನಾನು ಇವತ್ತು ಒಂದು ಆಲೋಚನೆ ಮಾಡಬೇಕಾಗಿದೆ. ಸೆಂಟ್ರಲ್ ಗೌರ್ನ್‌ಮೆಂಟ್‌ನವರು

ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಈ ಇನ್ಸಿಡೆಂಟ್ ನಡೆಯುವುದಕ್ಕೆ ಮೊದಲು ಮಿನಿಮಂ ಟೆನ್ ಡೇಸ್ ಬ್ಯಾಕ್ ಇಲ್ಲಿಗೆ ಮೆಸೇಜ್ ಕಳುಹಿಸಿದ್ದಾರೆ. ಒಂದು ವಾರದ ಮೊದಲೇ ಕೇಂದ್ರ ಸರ್ಕಾರದ ಇಂಟಲಿಜೆನ್ಸ್ ವಿಭಾಗ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮಾಹಿತಿ ಕೊಟ್ಟಿದೆ. None other than the Central Home Minister has revealed, on the floor of the Parliament itself. ಎಂದರೆ ಒಂದು ವಾರದ ಮೊದಲೇ ಈ ರೀತಿಯ ಒಂದು ಇನ್ಸಿಡೆಂಟ್ ನಡೆಯುತ್ತದೆ ಎಂದು ಬೆಂಗಳೂರಿನ ಪೊಲೀಸ್‌ನವರಿಗೆ ಇಂಟಿಮೇಷನ್ ಕೊಟ್ಟಿದ್ದರೂ ಕೂಡ ಅದರ ಬಗ್ಗೆ ಕಿಂಚತ್ತೂ ಕೂಡ ಗಮನ ಹರಿಸದೆ ಇರುವುದಕ್ಕೆ ಕಾರಣವೇನು? ಇಂತಹ ವಿಚಾರ ಚರ್ಚೆಯಾಗುತ್ತದೆ ಇಲ್ಲಿ ಪೊಲೀಸ್ ಆಫೀಸರ್ ಇಲ್ಲ. ಅದು ಮಾನ್ಯ ಮುಖ್ಯಮಂತ್ರಿಗಳಿಗೆ ಬಿಟ್ಟಂತಹ ವಿಚಾರ. ನಾವೇನು ಅದನ್ನು ಇನ್‌ಸಿಸ್ಟ್ ಮಾಡುವುದಿಲ್ಲ. ಏಕೆಂದರೆ ಅವರೆ ಗೃಹಮಂತ್ರಿಗಳಿದ್ದಾರೆ. He is the head of the Home Ministry. ಪೊಲೀಸ್‌ನವರು ಇರಬೇಕೆಂದು ನಾವು ನಿರೀಕ್ಷೆ ಮಾಡುತ್ತಿಲ್ಲ. ಈ ಘಟನೆ ಆಗುವುದಕ್ಕಿಂತ ಒಂದು ವಾರದ ಮೊದಲು ಕೇಂದ್ರ ಸರ್ಕಾರ ಇಂಟಿಮೇಷನ್ ಅನ್ನು ಕೊಟ್ಟಿತ್ತು. ಅದನ್ನು ಪರಿಗಣಿಸಲಿಲ್ಲ. ಈ ಘಟನೆಯಾಗಿ ಒಂದೂವರೆ ತಿಂಗಳಾಗುತ್ತಿದೆ. ಇವತ್ತಿನವರೆಗೂ ಕೂಡ ನಿಜವಾದ ಕಲ್ಪ್ರಿಟ್ಸ್ ಅನ್ನು ಹಿಡಿಯವುದಕ್ಕಾಗದೆ ಸುಮ್ಮನೆ ಕಣ್ಣು ಒರೆಸುವುದಕ್ಕೆ ಯಾರನ್ನೋ ಅರೆಸ್ಟ್ ಮಾಡಿದ್ದಾರೆ. ನನ್ನ ತಿಳುವಳಿಕೆ ಪ್ರಕಾರ ಯಾರನ್ನು ಅರೆಸ್ಟ್ ಮಾಡಿದ್ದಾರೆ. ಅವರಿಗೂ ಮತ್ತು ಆ ಘಟನೆಗೂ ಸಂಬಂಧ ಇದೆ ಎಂದು ಅನಿಸುತ್ತಿಲ್ಲ. ಸಂಬಂಧ ಇದೆ ಎಂದು ನಾನಂತೂ ಭಾವಿಸಲು ತಯಾರಿಲ್ಲ. ಪೊಲೀಸ್‌ನವರು ಕಣ್ಣು ಒರೆಸುವುದಕ್ಕೆ ಸರ್ಕಾರಕ್ಕೆ, ಜನರಿಗೆ ಏನೋ ಒಂದು ಮಾಹಿತಿ ಕೊಡಬೇಕೆಂದು ಒಂದಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ ಎಂದನಿಸುತ್ತದೆ ಹೊರತು ಅವರು ನಿಜವಾದಂತಹ ಕಲ್ಪ್ರಿಟ್ಸ್ ಅಲ್ಲ ಎಂದರೆ, ಇದರ ಅರ್ಥವೇನೆಂದರೆ it is completely a failure on the part of Intelligence and Police. ಅದು ಇವತ್ತಿನಿಂದ ಆಗಿರುವಂಥಾದ್ದಲ್ಲ. ಮಾನ್ಯ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಗಳಾದ ತಕ್ಷಣ ಇದು ಕೆಟ್ಟುಹೋಗಿಲ್ಲ. ಹಿಂದೆ ಇದ್ದಂತಹ ಇಂಟಲಿಜೆನ್ಸಿ ಚೀಫ್ ಯಾರ್ಯಾರು ಇದ್ದರು, ಆಗಿನ ಕಾಲದಿಂದ ಈ ಇಂಟಲಿಜೆನ್ಸ್ ಸಂಪೂರ್ಣವಾಗಿ ಫೆಲ್ಯೂರ್ ಆಗಿದೆ. ನೀವು ಯಾರನ್ನು ಇಂಟಲಿಜೆನ್ಸ್‌ಗೆ ಕಳುಹಿಸುವುದು ಗೊತ್ತಾ? ಸಿ.ಓ.ಡಿ. ಎನ್‌ಕ್ವೈರಿಗೆ ಒಳಪಟ್ಟಿರತಕ್ಕಂಥವರನ್ನು ಸಸ್ಪೆಂಡ್ ಆದಂತಹವರನ್ನು, ಲೋಕಾಯುಕ್ತದಲ್ಲಿ ಸಿಕ್ಕಿಹಾಕಿಕೊಂಡವರನ್ನು, ಎಲ್ಲೂ ಸಲ್ಲದವರನ್ನು Intelligenceಗೆ ಹಾಕುತ್ತೀರಿ. ಯಾರಾದರೂ ದಕ್ಷ ಪ್ರಾಮಾಣಿಕ ಅಧಿಕಾರಿಯನ್ನು ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ಗೆ ಹಾಕಿರುವ ದಾಖಲೆ ನನಗಂತೂ ಕಾಣುತ್ತಿಲ್ಲ ಎಲ್ಲಾ wounded soldiers. ನನ್ನ ಪ್ರಕಾರ ಇಂಟಲಿಜೆನ್ಸ್‌ಗೆ, ಸಿ.ಓ.ಡಿ. ಗೆ ಹೋಗುವವರು ಯಾರು ಎಂದರೆ wounded soldiers ಇನ್ನೇನು ರಿಟೈರ್ ಆಗುವುದಕ್ಕೆ ಆರು ತಿಂಗಳು ಒಂದು ವರ್ಷ ಇದ್ದವರನ್ನು ಅಲ್ಲಿ ಹಾಕುತ್ತಾರೆ.

ಅಧ್ಯಕ್ಷರು : ಈಗ ರೆಡ್ಡಿಯವರೆ, ಒಳ್ಳೆಯವರನ್ನೆಲ್ಲಾ ಶಾಸಕರು ಲೆಟರ್ ಕೊಟ್ಟು ಒಳ್ಳೊಳ್ಳೆಯ ಆಯಕಟ್ಟಿನ ಜಾಗಕ್ಕೆ ಹಾಕಿಸಿಕೊಂಡು ಬಿಟ್ಟರೆ, ಆಗ wounded ಅಲ್ಲಿಗೆ ಸಿಗುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ನಿಜಾನೆ, ನೀವು ಹೇಳುವುದರಲ್ಲಿ ಸತ್ಯಾಂಶ ಇದೆ. ಏಕೆಂದರೆ ಸರ್ಕಾರ ಎಂದರೆ Bureaucrats-Politicians Joint Stock Company. ಇದ್ದಹಾಗೆ. ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿ ಎಲ್ಲರು ಶೇರ್ ಹೋಲ್ಡರ್ಸ್. ಇದರಲ್ಲಿ ಯಾರೊಬ್ಬರ ಮೇಲೆ figure out ಮಾಡುವುದಕ್ಕೆ ಆಗುವುದಿಲ್ಲ. ನೀವು ಹೇಳುವುದು ಕೂಡ ಸತ್ಯವಾಗುತ್ತದೆ. ಆದರೆ ಎಲ್ಲಾ ಸಂದರ್ಭಗಳಲ್ಲೂ ನೀವು ಹೇಳಿದ್ದು ಸತ್ಯವಲ್ಲ. ಆದರೆ ನಾವಿಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿರುವುದು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಹೇಳುವುದಾದರೆ ಒಂದು ಕಡೆ ನಕ್ಸಲೈಟ್, ಇನ್ನೊಂದು ಕಡೆ ಕೋಮುವಾದಿ ಶಕ್ತಿಗಳು ಇನ್ನೊಂದು ಕಡೆ ನಮ್ಮ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ ಐಎಸ್‌ಐ ಆ್ಯಕ್ಟಿವಿಟೀಸ್, ಇನ್ನೊಂದು ಕಡೆ ಬೇರೆ ಬೇರೆ ಆ್ಯಕ್ಟಿವಿಟೀಸ್. ಇದರ ಜೊತೆಗೆ ಅಂಡರ್‌ವರ್ಲ್ಡ್ ಮಾಫಿಯಾ ಲ್ಯಾಂಡ್ ಮಾಫಿಯಾ ಅದರ ಜೊತೆಗೆ ದಿನನಿತ್ಯ ದರೋಡೆಗಳು ಹಾಗೂ ಕೊಲೆಗಳು. ನಿನ್ನೆ ಇಬ್ಬರು ದಂಪತಿಗಳ ಮೇಲೆ ಚಾಕುವಿನಲ್ಲಿ ತಿವಿದು ದರೋಡೆ ಮಾಡಿಕೊಂಡು ಹೋಗಿದ್ದಾರೆ. ಬೆಂಗಳೂರಿನಲ್ಲಿ ಕನಿಷ್ಟ ಎಂದರೆ ಪ್ರತಿ ದಿನಾ ಎರಡರಿಂದ ಮೂರು ಮರ್ಡರ್‌ಗಳು ಆಗುತ್ತಿವೆ. ಆದರೆ ಪೊಲೀಸ್‌ನವರ ಕೆಲಸವೇನು? ಕರ್ನಾಟಕ ರಾಜ್ಯದಲ್ಲಿ ಎಷ್ಟು ಸಂಖ್ಯೆ ಪೊಲೀಸ್‌ನವರು ಇದ್ದಾರೆ ಅದರಲ್ಲಿ ಅರ್ಧ ಜನ ಬೆಂಗಳೂರಿನಲ್ಲಿ ಇದ್ದಾರೆ. ಇಡೀ ರಾಜ್ಯದಲ್ಲಿ 50 ಪರ್ಸೆಂಟ್ ಇದ್ದರೆ, ಇಲ್ಲಿ ಬೆಂಗಳೂರಿನಲ್ಲಿ 50 ಪರ್ಸೆಂಟ್ ಇದ್ದಾರೆ. ಅತಿ ಹೆಚ್ಚು ಅಪರಾಧ ನಡೆಯುವಂಥಾದ್ದು, ಕೊಲೆ, ದರೋಡೆ, ಸುಲಿಗೆ ನಡೆಯುವಂಥಾದ್ದು ಬೆಂಗಳೂರಿನಲ್ಲಿ ಆಗುತ್ತದೆ. ಇಂತಹ ಬೆಂಗಳೂರಿನಲ್ಲಿ ಯಾವ ಐಟಿ, ಬಿಟಿ ಯನ್ನು ನೀವು ನಿರೀಕ್ಷೆ ಮಾಡುತ್ತೀರಿ? ಯಾವ ಇಂಟರ್ ನ್ಯಾಷನಲ್ ಕಂಪೆನಿಗಳನ್ನು ನೀವು ನಿರೀಕ್ಷೆ ಮಾಡುತ್ತೀರಿ? ಯಾವ ಇಂಡಸ್ಟ್ರಿಗಳನ್ನು ನಿರೀಕ್ಷೆ ಮಾಡಲು ಸಾಧ್ಯವಾಗುತ್ತದೆ? ಅದರ ಪರಿಣಾಮಗಳು ಇವತ್ತು ಯಾವ ಯಾವ ರೀತಿಯಲ್ಲಿ ಆಗುತ್ತದೆ? ಇವೆಲ್ಲವನ್ನು ಕೂಡ ಆಲೋಚನೆ ಮಾಡಬೇಕಾಗುತ್ತದೆ. ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಸೈನ್ಸ್ ಒಂದು ಪ್ರತಿಷ್ಠಿತವಾದಂತಹ ಸಂಸ್ಥೆಯಾಗಿದೆ. ಇಡೀ ಜಗತ್ತಿನಲ್ಲಿ ಪ್ರೆಸ್ಟೇಜ್ ಇರುವಂತಹ ಇನ್ಸ್‌ಟ್ಯೂಷನ್ ಆಗಿದೆ. ಅದರ ಮೇಲೆ ದಾಳಿ ನಡೆಯುತ್ತಿದೆ ಎಂದರೆ, ಅದರ ಪರಿಣಾಮ ಏನಾಗುತ್ತದೆಂಬುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಎರಡನೆಯದಾಗಿ, ಇಂಟಲಿಜೆನ್ಸ್ ಅನ್ನು ಸಂಪೂರ್ಣವಾಗಿ ಗೃಹ ಸಚಿವರು ರಿವ್ಯಾಂಪ್ ಮಾಡಬೇಕು. ಆ ಇಂಟಲಿಜೆನ್ಸ್‌ನ ಯಾರ್ಯಾರು ಇದ್ದಾರೊ, ಅವರನ್ನೆಲ್ಲಾ ಸಂಪೂರ್ಣವಾಗಿ ಬೇರೆ ಯಾವುದಾದರೂ ಕೆಲಸಕ್ಕೆ ಹಾಕಿ, ಅದು ಗೋಡೌನ್ ಕಾವಲು ಕಾಯುವುದಕ್ಕೊ ಅಥವಾ ಎಲ್ಲಾದರೂ ಸೆಕ್ಯೂರಿಟಿಗೆ ಒಂದು ಕಡೆ ಹಾಕಿಬಿಡಿ. ಇಲ್ಲಿ ಮೆಜಾರಿಟಿ ಇರುವವರು

ಅಲ್ಲಿರಲು ಲಾಯಕ್ ಇಲ್ಲ. ಅದನ್ನು ಸಂಪೂರ್ಣವಾಗಿ ರಿಫಲ್ ಮಾಡಿ, ನೀವು ಪ್ರಾಮಾಣಿಕವಾಗಿರುವಂತಹ ಯಂಗ್ ಬ್ಲಡ್‌ನ್ನು ಅಲ್ಲಿ ಪ್ಲೇಸ್ ಮಾಡಬೇಕಾಗುತ್ತದೆ. ಇಲ್ಲವೆಂದರೆ ಬೆಂಗಳೂರಿನಲ್ಲಿ ಅಪರಾಧಗಳನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ, ಇದು ಮೊದಲನೆಯದು. ಎರಡನೆಯದಾಗಿ ಪೊಲಿಟಿಕಲ್ ಇಂಟರ್‌ಫಿಯರೆನ್ಸ್, ಇಂಟಲಿಜೆನ್ಸ್‌ನಲ್ಲಿ ಸಂಪೂರ್ಣವಾಗಿ ಅವಾಯ್ಡ್ ಮಾಡಬೇಕು. ಈ ಬಗ್ಗೆ ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ, Political interference has played more effective role -the political interference in Intelligence Department ಅದನ್ನು ಅವಾಯ್ಡ್ ಮಾಡಬೇಕು ಮತ್ತೆ ಈಗ ಇರತಕ್ಕಂಥ Intelligence ಎಕ್ಯುಪ್‌ಮೆಂಟ್ಸ್, ಮಿಷನರಿ ಮತ್ತೆ ಇಲ್ಲಿ ಯಾರು ಇದ್ದಾರೆ, ಇವರಿಗೆಲ್ಲಾ ಮತ್ತೆ ರಿ ಟ್ರೈನಿಂಗ್ ಕೊಡಬೇಕಾಗುತ್ತದೆ. ರಿ ಎಕ್ಯುಪ್ ಮಾಡಬೇಕಾಗುತ್ತದೆ. Both mentally and physically ಕೂಡ ರಿ ಎಕ್ಯುಪ್ ಮಾಡಬೇಕಾಗುತ್ತದೆ, ಏಕೆಂದರೆ with all arms in changing conditions ನಲ್ಲಿ ಯಾವುದೋ ಹಳೆಯ 30 ವರ್ಷದ ಗನ್ ಅನ್ನು ಪೊಲೀಸ್‌ನವರ ಕೈಗೆ ಕೊಡುವಂಥಾದ್ದು ಸರಿ ಅಲ್ಲಿ. ಈ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುವ ಹಾಗೆ ಬೂಟ್ ಒಂದು ಅರ್ಧ ಅಡಿ, ಗನ್ ಒಂದು ಐದು ಕೆ.ಜಿ. ಇರುತ್ತದೆ. ಅದನ್ನು ಅವನು ಹೊತ್ತುಕೊಂಡು ಓಡುವುದಕ್ಕೆ ಆಗುವುದಿಲ್ಲ. ಅವನ ಒಂದು ಮೊಣಕಾಲು ಬಿದ್ದುಹೋಗಿ ಬಿಡುತ್ತದೆ. ಈಗ ಲೇಟೆಸ್ಟ್ ಆಗಿ ಏನು ಟೆಕ್ನಾಲಜಿ ಡೆವಲಪ್ ಆಗುತ್ತಿದೆ. ಅದರ ಪ್ರಕಾರ Intelligence ಅನ್ನು ರಿ ಎಕ್ಯುಪ್ ಮಾಡದೇ ಹೋದರೆ, ಇನ್ನು ಮುಂದೆ ಬೆಂಗಳೂರು ನಗರ, ಕರ್ನಾಟಕದಲ್ಲಿ ಬೆಳೆಯುತ್ತಿರುವಂತಹ ಟೆರರಿಸ್ಟ್ ಮತ್ತೆ secessionist forces, extremist forces, communal force ಇವೆಲ್ಲವನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಇನ್ನೊಂದು ಸಲ ಮನವಿ ಮಾಡುವುದೇನೆಂದರೆ, don't depend completely on bureaucracy. You must apply your mind. ಏಕೆಂದರೆ ನಮಗೆ ಗೊತ್ತಿದೆ. ಯಾವ ಸರ್ಕಾರ ಬಂದರೂ ಇವೇ ಇರುವುದು. ನಿಮ್ಮ ಸರ್ಕಾರ ಬಂದರೂ ಇವರೇ ಇರುತ್ತಾರೆ, ಇನ್ನೊಂದು ಸರ್ಕಾರ ಬಂದರೂ ಇವರೇ ಇರುತ್ತಾರೆ. ಯಾರು ಬಂದರೂ ಇವರೇ ಇರುತ್ತಾರೆ. ಬದಲಾವಣೆ ಆಗುವುದೆಂದರೆ ನಾವು, ಇವರು ಮಾತ್ರ ಪರ್ಮನೆಂಟ್ ಇರುತ್ತಾರೆ. ಅದಕ್ಕೆ ಕೆಲವು ಆಫೀಸರ್ಸ್‌ಗೆ, "ಇವರು ಏನು ಐದು ವರ್ಷಗಳು ಇರುತ್ತಾರೆ, ಬಾಯಿ ಬಡಿದುಕೊಂಡು ಹೋಗುತ್ತಾರೆ. ನಾವು 35 ವರ್ಷಗಳು ಇಲ್ಲೆ ಇರುತ್ತೇವೆ, ಏನು ಮಾಡುತ್ತಾರೆ?" ಎಂದು ಕೆಲವರು ನಮ್ಮನ್ನು ನೋಡಿದರೆ ಉದಾಸೀನವನ್ನು ಮಾಡುತ್ತಾರೆ. ಹೌದು, ನಾವು 5 ವರ್ಷಗಳಿಗೆ ಒಂದು ಸಾರಿ ಪರೀಕ್ಷೆಯನ್ನು ಬರೆಯಬೇಕು. ಅವರಿಗೆ ಆ ಜವಾಬ್ದಾರಿ ಇಲ್ಲ. ಇವರು ಒಂದು ಸಾರಿ ಪರೀಕ್ಷೆಯನ್ನು ಬರೆದುಬಿಟ್ಟು, ಬಂದರೆ 35 ವರ್ಷಗಳು ಆರಾಮವಾಗಿ ಇರಬಹುದು. ನಾವು 5 ವರ್ಷಗಳಿಗೊಮ್ಮೆ ಪರೀಕ್ಷೆಯನ್ನು ಬರೆದು

ಜನರ ಹತ್ತಿರ ಸರ್ಟಿಫಿಕೇಟ್ ಅನ್ನು ತೆಗೆದುಕೊಂಡು ಇಲ್ಲಿಗೆ ಬರಬೇಕು. ಈ ಕಷ್ಟ ಅವರಿಗೆ ಇಲ್ಲ. ಆದುದರಿಂದ ಅವರ ಲೈನ್ ಆಫ್ ಥಿಂಕಿಂಗ್ ಬೇರೆಯಾಗಿದೆ. ನಮ್ಮ ಲೈನ್ ಆಫ್ ಥಿಂಕಿಂಗ್‌ಗೆ ಬೇರೆ ಇದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು you must apply your mind independently and try to solve it.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಬಗ್ಗೆ ಬಹಳ ವಿಶೇಷವಾದಂತಹ ಒಂದು ವ್ಯವಸ್ಥೆ ಆಗಬೇಕಾಗಿದೆ. ಇಡೀ ರಾಜ್ಯದ ಕಾನೂನು ಸುವ್ಯವಸ್ಥೆಗೆ ಒಂದು ಕಡೆ ಆದರೆ, ಬೆಂಗಳೂರು ನಗರದ ಬಗ್ಗೆ ಸುಮಾರು 20 ವರ್ಷಗಳಲ್ಲಿ 75 ಲಕ್ಷ ಜನರ ದೊಡ್ಡ ನಗರವಾಗಿ ಬೆಳೆಯುತ್ತಿದೆ. ಇನ್ನು ಎರಡು, ಮೂರು ವರ್ಷಗಳಲ್ಲಿ ಹೆಚ್ಚು ಕಡಿಮೆ ಇದರ ಪಕ್ಕದಲ್ಲಿರುವಂತಹ ಹೊಸಕೋಟೆ, ನೆಲಮಂಗಲ, ದೇವನಹಳ್ಳಿ ಇವೆಲ್ಲವೂ ಸೇರಿದರೆ ಸುಮಾರು ಒಂದು, ಒಂದೂವರೆ ಕೋಟಿ ಜನಸಂಖ್ಯೆ ಆಗುತ್ತದೆ. ಬೆಂಗಳೂರು ಒಂದು ರಾಜ್ಯವಾಗುತ್ತದೆ. ನನಗನಿಸುವುದೇನೆಂದರೆ ಬೆಂಗಳೂರು ನಗರಕ್ಕೆ ಒಂದು ವಿಶೇಷವಾದಂತಹ ವ್ಯವಸ್ಥೆಯಾಗ ಬೇಕಾಗಿರುವಂಥಾದ್ದು ನಮ್ಮ ಕರ್ತವ್ಯವಾಗಿದೆ. ಈಗ ಇರುವಂತಹ ವ್ಯವಸ್ಥೆಯಲ್ಲಿ ಸಾಧ್ಯವೇ ಇಲ್ಲ. ಎರಡನೆಯದಾಗಿ ಈ ಬೆಂಗಳೂರು ಮತ್ತು ಕರ್ನಾಟಕ ರಾಜ್ಯದಲ್ಲಿ ಶಾಂತಿ ಇದೆಯೆಂದು ಹೇಳಿ, ಬೇರೆ ಬೇರೆ ರಾಜ್ಯಗಳಿಂದ ಎಲ್ಲಾ ಜನರು ಇಲ್ಲೆ ಬರುತ್ತಿದ್ದಾರೆ. ತಾವು ಒಮ್ಮೆ ಗಮನವನ್ನು ಹರಿಸಬೇಕು. ಇಡೀ ಬೆಂಗಳೂರು ನಗರವನ್ನು ಸುತ್ತು ಹೊಡೆಯಬೇಕು. ಯಾರು ಎಲ್ಲಿ ಬಂದಿದ್ದಾರೆ, ಎಲ್ಲಿ ಇಳಿದುಕೊಂಡಿದ್ದಾರೆ. ಎಲ್ಲಿ ಮನೆಯನ್ನು ತೆಗೆದುಕೊಂಡಿದ್ದಾರೆಂಬುದು ಯಾರಿಗೂ ಗೊತ್ತಾಗುವುದಿಲ್ಲ. ಬೆಂಗಳೂರು ನಗರದಲ್ಲಿ ಭಯೋತ್ಪಾದಕರು ಬರುತ್ತಾರ, ಬೇರೆ ಜನರು ಬರುತ್ತಾರ, ಯಾರ್ಯಾರೋ ಬರುತ್ತಾರೆ, ಎಲ್ಲಿಂದ ಬರುತ್ತಾರೆಂಬುದು ಒಂದು ಚೂರು ಗೊತ್ತಾಗುವುದಿಲ್ಲ ಮತ್ತೆ ಬೆಂಗಳೂರು ನಗರದಲ್ಲಿ ನಡೆಯುತ್ತಿರುವಂತಹ ನಮ್ಮ ಪೊಲೀಸ್ ವ್ಯವಸ್ಥೆ ಏನು ಇದೆ, ನಾನು ಪ್ರಾಮಾಣಿಕವಾಗಿ ಅವರನ್ನು ಆಕ್ಷೇಪಣೆ ಮಾಡಬೇಕೆಂದು ಇಲ್ಲ, ಈ ವ್ಯವಸ್ಥೆ ಸಾಕಾಗುವುದಿಲ್ಲ. ಈಗ ಇರುವಂತಹ ವ್ಯವಸ್ಥೆ ಶೇ.10 ಭಾಗ ಇನ್ನು ಸಮಗ್ರವಾದಂತಹ ವ್ಯವಸ್ಥೆಯಾಗಬೇಕಾಗಿದೆ. ಒಂದು ರೀತಿ ಭಯೋತ್ಪಾದಕರ ನಗರವಾಗಿ ಪರಿಣಮಿಸುತ್ತಿದೆ. ಇದು ಈ ಬೆಂಗಳೂರು ನಗರದಲ್ಲಿ ನಡೆಯುತ್ತಿರುವಂತಹ ಅನೇಕ ವಿಚಾರಗಳ ಬಗ್ಗೆ, ತಾವು ಗುಪ್ತವಾಗಿ ಒಂದು ಚರ್ಚೆಯನ್ನು ಮಾಡಿ, ಇಲ್ಲವೆಂದರೆ ಬಹಿರಂಗವಾಗಿಯೆ ಚರ್ಚೆ ಮಾಡಿ. ಅನೇಕ ವಿಚಾರದಲ್ಲಿ ಇಲ್ಲಿರುವಂತಹ ಕೆಟ್ಟ ಚಾಳಿಗಳು, ಕೆಟ್ಟ ವ್ಯವಸ್ಥೆಗಳು, ಇದನ್ನು ನೋಡಿದರೆ ಮುಂದೆ ಯಾವ ಪರಿಸ್ಥಿತಿಗೆ ಹೋಗುತ್ತದೊ ಗೊತ್ತಿಲ್ಲ. ಒಂದು ಕಾಲದಲ್ಲಿ, ನಾವು ಬಹಳ ಹಿಂದೆ ಕೇಳಿರುವಂತೆ ಆಗ ಬಹಿರಂಗವಾಗಿ ಕೊಲೆಯಾಗಿದ್ದು ಬೇಲೂರು ಶ್ರೀನಿವಾಸ ಅಯ್ಯಂಗಾರ್ ಕೊಲೆ ಎಂದು ನಾವು ಬಹಳ ಹಿಂದೆ ಕೇಳಿರುವಂಥಾದ್ದು. ಗಾಂಧೀನಗರದಲ್ಲಿ ಒಬ್ಬ ವಕೀಲರ ಕೊಲೆ ಆಯಿತು. ಆ ರೀತಿ ಬೆಂಗಳೂರು ನಗರದಲ್ಲಿ ಎಂದೆಂದೂ ಆಗಿರಲಿಲ್ಲ.

ಇದು ಒಂದು ಶಾಂತಿಯ ನಗರ, ಒಂದು ಸೌಹಾರ್ದತೀತ ನಗರವಾಗಿತ್ತು. ಈಗ ಪ್ರತಿನಿತ್ಯ ಯಾರು ಮನೆಯಿಂದ ಹೊರಗಡೆ ಹೋಗುವುದಕ್ಕೆ ಸಾಧ್ಯವಿಲ್ಲ. ಮನೆಗಳಿಗೆ ರಕ್ಷಣೆ ಇಲ್ಲ, ಜನರಿಗೆ ರಕ್ಷಣೆ ಇಲ್ಲ, ಸಾಮಾನ್ಯ ಜನರಿಗೆ ರಕ್ಷಣೆ ಇಲ್ಲ. ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ವಿಜ್ಞಾನಿಯ ಕೊಲೆಯಾಗಬೇಕಾದರೆ ಅದು ಎಷ್ಟು ಸುಲಭವಾಗಿ ಆಯಿತೆಂದರೆ, ಒಂದು ವ್ಯಾನ್‌ನಲ್ಲಿ ಬರುತ್ತಾರೆ, ಅವರನ್ನು ಕೊಲ್ಲುತ್ತಾರೆ, ವ್ಯಾನ್ ಹೋಗುತ್ತದೆ, ಆ ವ್ಯಾನ್ ಯಾರದು ಎಂದು ಗೊತ್ತಾಗುವುದಿಲ್ಲ. ಇವರನ್ನು ಕೊಂದವರು ಯಾರೆಂಬುದು ಗೊತ್ತಾಗುವುದಿಲ್ಲ. ಬಂದವರು ಯಾರೆಂಬುದು ಗೊತ್ತಾಗುವುದಿಲ್ಲ. ಈ ವ್ಯವಸ್ಥೆ ನಿರ್ಮಾಣ ವಾಗುತ್ತಿದೆ. ಇಲ್ಲಿ ಟಿಬೆಟಿಯನ್ನರ ಬೇಡಿಕೆ ಇದೆ. ಅದನ್ನು ನಾನು ಒಪ್ಪುತ್ತೇನೆ. ಈ ಟಿಬೆಟ್ಟಿಗೆ ಸ್ವಾತಂತ್ರ್ಯ ಬರಬೇಕೆಂಬುದು ಅವರ ಬೇಡಿಕೆ, ಅವರ ಬೇಡಿಕೆಗೆ ಚೀನಾ ದೇಶದ ಪ್ರಧಾನಿಯವರು ಬಂದಾಗ ಎಷ್ಟು ವ್ಯವಸ್ಥಿತವಾಗಿ ಒಂದೂವರೆ ದಿವಸ ಅಲ್ಲೆ ಮೇಲೆ ಕಾದಿದ್ದು, ಟಿಬೆಟ್‌ನವರು ತಮ್ಮ ಬಾವುಟವನ್ನು ಹಾರಿಸಲು ಬಿಲ್ಡಿಂಗ್ ಮೇಲೆ ಒಂದೂವರೆ ದಿವಸ ಕಾದಿದ್ದಾರೆ. ಅಲ್ಲಿ ಪ್ರಧಾನಿಯವರ ಸಮಾರಂಭವಾದ ತಕ್ಷಣ ನಿಧಾನವಾಗಿ ಬಾವುಟವನ್ನು ಬಿಡುತ್ತಾನೆ. ನಾನು ಅವರ ಬೇಡಿಕೆಯನ್ನು ಬೆಂಬಲಿಸುತ್ತೇನೆ. ಟಿಬೆಟ್‌ನವರಿಗೆ ಸ್ವಾತಂತ್ರ್ಯ ಬರಬೇಕು, ಅದಕ್ಕೆ ನಾನು ಬೆಂಬಲಿಸುತ್ತೇನೆ ಎಂದು ಹೇಳಿದ್ದಾನೆ. ಆದರೆ ಅದು ನಡೆದಂತಹ ಸಂದರ್ಭದಲ್ಲಿ ಇನ್ನೆನ್ನಾದರೂ ಅನಾಹುತವಾಗಿದ್ದರೆ, ರಾಜ್ಯದ ಗತಿ ಏನು? ನಮ್ಮ ವ್ಯವಸ್ಥೆಯ ಗತಿ ಏನು? ಆದುದರಿಂದ ಬೆಂಗಳೂರು ನಗರಕ್ಕೆ, ವಿಶೇಷವಾದಂತಹ ಪೊಲೀಸ್ ವ್ಯವಸ್ಥೆಯನ್ನು ತಾವು ಮಾಡಲೇ ಬೇಕು. ಇದಕ್ಕೆ ಎಷ್ಟೇ ಖರ್ಚು ಆಗಲಿ, ಅದನ್ನು ತಾವು ಮಾಡಬೇಕು ಮತ್ತೆ ಹೊರಗಡೆಯಿಂದ ಬರುವಂತಹ ಜನರ ಬಗ್ಗೆ ಸಂಪೂರ್ಣವಾದಂತಹ ಮಾಹಿತಿ ಇರಬೇಕು. ಈ ಹೊರಗಡೆಯಿಂದ ಬರುತ್ತಿರುವಂತಹ ಜನರಿಂದಲೇ ಬೆಂಗಳೂರು ನಗರದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿರುವಂಥಾದ್ದು. ಇದರ ಬಗ್ಗೆ ಇನ್ನು ಸಮಗ್ರವಾಗಿ ಚರ್ಚೆ ಮಾಡಬೇಕಾಗುತ್ತದೆ. ಇದರ ಜೊತೆಗೆ ನಾನು ಹಿಂದೆ ಈ ಮಾತನ್ನು ಹೇಳಿದ್ದೇನೆ. ಧರ್ಮವೀರ ಸಮಿತಿಯು ಒಂದು ವರದಿಯನ್ನು ಕೊಟ್ಟಿದೆ. ಆ ವರದಿ ಎಲ್ಲಿ ಇದೆ, ಅದನ್ನು ತೆಗೆಸಿ, ಅದರಲ್ಲಿ ಏನು ಮಾಡಬಹುದು, ಎಷ್ಟು ಪರಿಣಾಮಕಾರಿಯಾಗಿ ಕೆಲಸವನ್ನು ಮಾಡಬಹುದು ಮತ್ತು ಎಷ್ಟು ಅನುಕೂಲವನ್ನು ಮಾಡಬಹುದೆಂಬುದು ಇದೆ. ನಾವು ಬರೀ ಸುವ್ಯವಸ್ಥೆಯನ್ನು ಕೇಳುವಂತಹ ಜನರು ಆಗಿದ್ದು, ಇಲ್ಲಿ ಪೊಲೀಸರ ಹಿತವನ್ನು ಕಾಪಾಡುವಂಥಾದ್ದು ಆಗಬೇಕು, ಅದು ಸಹ ಬಹಳ ಪ್ರಾಮುಖ್ಯವಾಗಿದೆ. ಪೊಲೀಸರ ಹಿತವನ್ನು ನಾವು ಕಾಪಾಡದೆ, ಈ ಕಡೆ ನಾವು ಬರೀ ಸುವ್ಯವಸ್ಥೆ ಎಂದರೆ ಆಗುವುದಿಲ್ಲ. ಆದುದರಿಂದ ಅವರ ಹಿತವನ್ನು ಕಾಪಾಡುವುದಕ್ಕೆ ಪರಿಣಾಮಕಾರಿಯಾಗಿ ಧರ್ಮವೀರರವರು ಒಂದು ಉತ್ತಮವಾದಂತಹ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ತಾವು ತೆಗೆದುಕೊಳ್ಳಬೇಕು, ಅದು ಪೊಲೀಸ್‌ನವರ ಸಣ್ಣ ಕೆಲಸಗಾರರಿಂದ ಹಿಡಿದು ಮೇಲ್ವರ್ಗದವರಿಗೂ ಏನೇನು

ಮಾಡಬೇಕೆಂಬ ಬಗ್ಗೆ, ಅತ್ಯಂತ ಸುಂದರವಾದಂತಹ ವರದಿಯನ್ನು ಕೊಟ್ಟಿದ್ದಾರೆ. ತಾವು ಆ ವರದಿಯನ್ನು ಕಾರ್ಯಗತ ಮಾಡುವುದರಿಂದ, ಈ ಕಾನೂನು ಸುವ್ಯವಸ್ಥೆಯನ್ನು ಸರಿಪಡಿಸುವ ಮೂಲಕ ಒಂದು ಹೊಸ ಯೋಜನೆ ಮೂಲಕ ಪೊಲೀಸ್ ಇಲಾಖೆಯನ್ನೆ ಸಂಪೂರ್ಣವಾಗಿ, ಸಮಗ್ರವಾಗಿ ಬದಲಾವಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ. ಇಲ್ಲಿ ಪೊಲೀಸ್ ಇಲಾಖೆಯಲ್ಲಿ ಇದ್ದಂತಹ ಶ್ರೀ ಬಿ.ಸಿ. ಪಾಟೀಲ್‌ರವರು ಇದ್ದಾರೆ. ಅವರ ಸಲಹೆಯನ್ನು ತೆಗೆದುಕೊಳ್ಳಿ. ಅವರನ್ನು ಮಂತ್ರಿಯನ್ನಾಗಿ ಮಾಡಿ, ಅವರಿಂದ ಅನುಕೂಲವಾಗುತ್ತದೆಂದು ನನಗೆ ಅನಿಸುತ್ತದೆ. ಅವರನ್ನು ನಿಮ್ಮ ಜೊತೆಯಲ್ಲಿ ಇಟ್ಟುಕೊಂಡರೆ ಒಳ್ಳೆಯದೆಂದು ಕಾಣುತ್ತದೆ. ಅವರಿಗೆ ಅನುಭವವಿದೆಯೆಂದು ನನಗನಿಸುತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಚರ್ಚೆ ಅವತ್ತು ಏನು ಆರಂಭ ಆಗಬೇಕಾಗಿತ್ತು. ಅದರ ಗಹನತೆ, ಅದರ ಸಿರೀಯಸ್‌ನೆಸ್, ಪರಿಣಾಮ ಸಭೆಯಲ್ಲಿ ಉಳಿದಿಲ್ಲವೆಂದು ನಾನು ಭಾವಿಸುತ್ತೇನೆ. ಬಹಳ ನವಿರಾದಂತಹ ವಿಷಯವನ್ನು ಚರ್ಚೆ ಮಾಡುವ ಕಾಲ ಅಷ್ಟು ಚೆನ್ನಾಗಿ ಆಗಲಿಲ್ಲ. ಇಲ್ಲಿ ಎರಡು ವಿಷಯಗಳು ಇದ್ದು, ಅದರಲ್ಲಿ ಮೊದಲನೆಯದು ಸೆಕ್ಯೂರಿಟಿ, ಇನ್ನೊಂದು ಮುಂದೆ ಏನು ಮಾಡಬೇಕೆಂಬುದು ಇದೆ. ನಮಗೆ ಸೆಕ್ಯುರಿಟಿ ಇಲ್ಲವೆಂಬುದನ್ನು ನಾವು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಕರ್ನಾಟಕ ರಾಜ್ಯದ ಪುಣ್ಯ, ನಮ್ಮ ಮೇಲೆ ಯಾರೂ ಇನ್ನು ಬಿದ್ದಿಲ್ಲ. ಬಿಟ್ಟರೆ ನಮಗೆ ರಕ್ಷಣೆ ಇದೆಯೆಂದು ನಾವು ಭಾವಿಸುವುದಕ್ಕೆ ಆಗುವುದಿಲ್ಲ. ಎರಡನೆಯದು ಸರ್ಕಾರ ಏನು ಮಾಡಬಹುದಾಗಿತ್ತು? ನಾವು ಏನು ಮಾಡಬೇಕಾಗಿತ್ತು, ಎಂಬ ಬಗ್ಗೆ ಚಿಂತನೆ ಮಾಡಿದಾಗ, ಸೆಕ್ಯೂರಿಟಿಗೆ ಪೊಲೀಸ್‌ನವರನ್ನು ವಹಿಸಿದ್ದೆ ತಪ್ಪೆಂದು ನನ್ನ ಭಾವನೆ. ಈಗ ಅವರಿಗೆ ಸೀಮಿತವಾದಂತಹ ಕೆಲಸ ಕಾರ್ಯಗಳು ಇರುತ್ತವೆ. ನಾವು ಯಾವಾಗಲೂ ಇಂಟಲಿಜೆನ್ಸ್ ಎಂದರೆ ಬಹಳ ಸೋರ್ಸ್‌ಗಳಿಂದ ಬರಬೇಕು. Informants ಇರಬೇಕು, Paid Informants ಇರಬೇಕು. ದೇಶಭಕ್ತರು ಇರಬೇಕು, ತಮ್ಮ ಶಿಷ್ಯರುಗಳು ಇರಬೇಕು, ನಮ್ಮ ಬದುಕನ್ನು ಪ್ರೀತಿಸುವವರು ಇರಬೇಕು. ನಮಗೆ ನಾಳೆ ದಿವಸ ಕಷ್ಟ ಸುಖಗಳು ಅಡ್ಡಿ ಮಾಡುತ್ತದಾ? ಯಾವ್ಯಾವ ಮೂಲದಿಂದಲಾದರೂ ನಮಗೆ ವರ್ತಮಾನವನ್ನು ಕೊಡುವವರು ಇರಬೇಕು. ಆ ಹಂತ ಏನು ಇದೆ, ಅದು ಇವತ್ತು ಪೊಲೀಸ್‌ನಲ್ಲಿ ಉಳಿದಿಲ್ಲ. ಇನ್‌ಫಾರ್ಮೆಂಟ್ಸ್ ಇಟ್ಟುಕೊಳ್ಳುವುದು, ಅವರಿಗೆ ಫೀಡ್ ಮಾಡುವುದು, ಬೇರೆ ಬೇರೆ ಮೂಲಗಳಿಂದ ಇನ್‌ಫಾರ್ಮೇಷನ್ ತೆಗೆದುಕೊಳ್ಳುವುದು. ಅದರ ಮೇಲೆ ಮಫ್ತಿ ಪೊಲೀಸಿನವರು ಅಂದರೆ ವಿತೌಟ್ ಯೂನಿಫಾರಂ ಹೋಗುವುದು, ಕೆಲಸ ಮಾಡುವುದು ಇವೆಲ್ಲಾ ಈಗ ಹೋಗಿಬಿಟ್ಟಿದೆ. ಇನ್‌ಟೆಲಿಜೆನ್ಸ್‌ನವರು ಎಂದರೆ, ಅವರು ಈಗಾಗಲೇ ಹೇಳಿದ ಹಾಗೆ, ಬೇರೆ ಕಡೆ ಪೋಸ್ಟಿಂಗ್ ಸಿಗದೇ ಅಲ್ಲಿ ಹೋಗುವಂಥವರು. ಅವರ ಬಗ್ಗೆ ಈಗ ಮುಖ್ಯಮಂತ್ರಿಗಳಾದ ತಾವು ಯೋಚನೆ ಮಾಡಬೇಕಾಗಿದೆ. ಏಕೆಂದರೆ, ಹಿಟ್‌ಲಿಸ್ಟ್ ಸ್ಟಾರ್ಟ್ ಆದರೆ, ನಿಮ್ಮಿಂದಲೇ ನಂಬರ್ ಒನ್ ಎಂದು ಅದು ಸ್ಟಾರ್ಟ್ ಆಗಿ

ಬಿಡುತ್ತದೆ. ಅದು ಯಾವಾಗ ಆಗುತ್ತದೆ ಎಂದು ಗೊತ್ತಿಲ್ಲ. ಎರಡನೆಯದಾಗಿ, ಪೊಲೀಸ್‌ದು ಏನಾಗುತ್ತದೆಂದರೆ, ಅಮೇರಿಕಾದಲ್ಲಿ ಆದಂಥ ಬ್ಲಾಸ್ಟ್ ಬಗ್ಗೆ ನಾನು 9:11 ರಿಪೋರ್ಟ್ ಕೂಡ ಓದಿದೆ. ಪ್ರತಿ ಹಂತದಲ್ಲಿ ಇಂಟೆಲಿಜೆನ್ಸ್ ಹೇಳುತ್ತಾ ಹೋಗುತ್ತದೆ. ಅಮೆರಿಕಾ ಅಧ್ಯಕ್ಷರ ಕೆಳಗಿರುವಂಥ ಒಂದು ವ್ಯವಸ್ಥೆಗೇ, ಅಲ್ಲಿಯ ಇಂಟೆಲಿಜೆನ್ಸ್ ಏಜೆನ್ಸಿಗೇ ಹೀಗಾಗಬಹುದು ಎಂದು ಹೇಳುತ್ತದೆ. ಆದರೆ, ಅದನ್ನು ಯಾರೂ ಸೀರಿಯಸ್ಸಾಗಿ ತೆಗೆದುಕೊಳ್ಳುವುದಿಲ್ಲ. ಏಕೆ? Every day they report; every hour they report. ಇಂಟೆಲಿಜೆನ್ಸಿ ವರದಿ ಬರುವುದು ಒಂದು ರೊಟೀನ್ ಆಗಿಬಿಡುತ್ತದೆ. ತಾವು ಈಗ ಮುಖ್ಯಮಂತ್ರಿಗಳು. ತಾವು ಬಂದ 8–10 ದಿವಸ ಅದನ್ನು ಸೀರಿಯಸ್ಸಾಗಿ ಓದುತ್ತೀರಿ. ಆಮೇಲೆ ತಲೆಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಇವರದ್ದು ಏನಿರುತ್ತದೆ, ಇವರದ್ದು ಹೇಗಿರುತ್ತದೆ, ಸಂಜೆ ಒಂದು ಸಾರಿ, ಬೆಳಿಗ್ಗೆ ಒಂದು ಸಾರಿ ಬರುತ್ತಾರೆ, ಒಂದು ಸೆಲ್ಯೂಟ್ ಹೊಡೆದು ಹೇಳಿ ಹೋಗುತ್ತಾರೆ ಎನ್ನುವ ಭಾವನೆ ನಮಗೆ ಡೆವಲಪ್ ಆಗಿಬಿಡುತ್ತದೆ. ಅದು ಸ್ವಾಭಾವಿಕ. ಏಕೆಂದರೆ, ಅವರು ಹೇಳಿರುವ ಘಟನೆಗಳಲ್ಲಿ ಮಧ್ಯದಲ್ಲಿ ಯಾವುದಾದರೊಂದು ಘಟನೆ ನಡೆಯದೇ ಹೋಗಬಹುದು. ಆದರೆ ಹೇಳುವುದು ಇಂಟೆಲಿಜೆನ್ಸ್‌ನವರ ಕರ್ತವ್ಯವಷ್ಟೇ. "ಹೀಗಾಗಬಹುದು, ನೀವು ಹುಷಾರಾಗಿರಿ ಎಂದು ನಿಮ್ಮನ್ನು ಎಚ್ಚರಿಸುವುದು" ಅವರ ಕರ್ತವ್ಯ. ಮೊನ್ನೆ ನಾನು ಹೇಳುತ್ತಿದ್ದೆ. ಧರ್ಮಸ್ಥಳಕ್ಕೆ ಹೋಗಬೇಕಾದರೆ ತಿರುವಿನಲ್ಲಿ ಒಂದು ಬೋರ್ಡ್ ಇದೆ. ಮೊದಲು, ಮೆಲ್ಲಗೆ ಹೋಗಿರಿ ಎಂದು ಹಾಕುತ್ತಿದ್ದರು. ಈಗ ನಿಮ್ಮನ್ನು ಎಚ್ಚರಿಸಿದೆ ಎಂದು ಹಾಕಿಬಿಟ್ಟಿದ್ದಾರೆ. ಮೆಲ್ಲಗಾದರೂ ಹೋಗಿ, ಬೇಡವೆಂದರೆ ಜೋರಾಗಿ ಹೋಗಿ ನೆಗೆದುಬಿದ್ದು ಸಾಯಿರಿ ಎಂದು ಹೀಗೆ ಮಾಡಿದ್ದಾರೆ. ನಿಮಗೆ ಇಂಟೆಲಿಜೆನ್ಸ್ ಮಾಡುವುದೂ ಅಷ್ಟೇ. ಏನಾಗಬಹುದು, ಹೇಗಾಗಬಹುದು ಎಂದು they can tell you and they can forecast. ಇವತ್ತು ನಮ್ಮಲ್ಲಿರುವ ಪೊಲೀಸಿನವರಿಗೆ ತರಬೇತಿಯ ಕೊರತೆ ಇದೆ. ನಮ್ಮಲ್ಲಿರುವ ಪೊಲೀಸರು ಇವತ್ತು ಆ ಟಾಸ್ಕ್‌ಫೋರ್ಸ್ ಆಗಿ ಉಳಿದಿಲ್ಲ. ಅವರಿಗೆ ಆ ಮಟ್ಟದ ತರಬೇತಿಯನ್ನೇ ನಾವು ಕೊಡುತ್ತಿಲ್ಲ. ಪಾಪ, ನಾವು ಇನ್ನೂ ಎಷ್ಟೋ ಜನರನ್ನು ನೋಡುತ್ತಿದ್ದೇವೆ. ಲೆಫ್ಟ್ ಎಂದರೆ ಬಲಗಾಲನ್ನಿಡುತ್ತಾರೆ, ರೈಟ್ ಎಂದರೆ ಎಡಗಾಲನ್ನಿಡುತ್ತಾರೆ. ಮಾರ್ಚ್‌ಫಾಸ್ಟ್ ಮಾಡುವಾಗ ಲೆಫ್ಟ್, ರೈಟ್ ಎಂದು ಬಾಯಲ್ಲಿ ಹೇಳುವುದಷ್ಟೇ. ಸ್ಕೂಲಿನಿಂದ ಹಿಡಿದು ಪೊಲೀಸರವರೆಗೂ ನಾವು ನೋಡುವುದಾದರೆ ಮಾರ್ಚ್‌ಫಾಸ್ಟ್‌ನಲ್ಲಿ ಯಾವುದೋ ಒಂದು ಕಾಲನ್ನಿಡುತ್ತಾರೆ. ಲೆಫ್ಟ್ ಎಂದು ಹೇಳುತ್ತಿದ್ದಾರೆ, ತಪ್ಪು ಹೆಜ್ಜೆ ಇಡುತ್ತಿರುವ ಕಾಲನ್ನು ಸರಿಮಾಡಿಕೊಳ್ಳೋಣ ಎನ್ನುವುದೂ ಅವರ ಬುರುಡೆಗೆ ಹೋಗುವುದಿಲ್ಲ. ಆ ಸ್ಥಿತಿಯಲ್ಲಿ ಇವತ್ತು ನಾವಿದ್ದೇವೆ. ಇಂಥವರಿಂದ ನಾವು ಏನು ನಿರೀಕ್ಷೆ ಮಾಡಬಹುದು? ನಾವು ಯಾರನ್ನು ದೂರಬೇಕು? ನಾವು ಯಾರ ಬಗ್ಗೆಯಾದರೂ ಮಾತನಾಡಬೇಕು, ಅವರ ಬಗ್ಗೆ ಏನನ್ನಾದರೂ ಅನ್ನಬೇಕೆಂದರೆ ಅದಕ್ಕೂ ಮೊದಲು ಅವನನ್ನು ನಾವು

ಎಕ್ವಿಪ್ ಮಾಡಬೇಕು. Have we equipped that personnel? ಬೆಂಗಳೂರಿನಂಥ ದೊಡ್ಡ ಪ್ರಮಾಣದ ನಗರದಲ್ಲಿ, ಅದರ ಮೂಲೆಮೂಲೆಗಳಿಂದ ಇನ್‌ಫಾರ್ಮೇಷನ್ ತಂದುಕೊಡುವಂಥ ಸ್ಥಿತಿಗೆ ನಾವು ಯಾರನ್ನಾದರೂ ತಯಾರು ಮಾಡಿ ಬಿಟ್ಟಿದ್ದೇವೆಯೇ? ಯಾವ ಕ್ಯಾಂಪಸ್‌ನಲ್ಲಿ ನಾರ್ಕೋಟಿಕ್ ಆ್ಯಕ್ಟಿವಿಟಿಯಾಗುತ್ತದೆ. ಎಲ್ಲಿ ಕೆಟ್ಟ ವ್ಯವಹಾರಗಳು ನಡೆಯುತ್ತಿವೆ, ಹೊರಗಡೆಯಿಂದ ಬಂದಿರುವವರು ಎಲ್ಲಿ ವಾಸ ಮಾಡುತ್ತಿದ್ದಾರೆ. ಏನಾಗುತ್ತಿದೆ ಎಂದು ಅವರಿಗೆ ಗೊತ್ತಿದ್ದರೆ, ನೀವೇನಾದರೂ ಒಂದು ಇಂಟೆಲಿಜೆನ್ಸ್ ಕ್ರಮವನ್ನು ತೆಗೆದುಕೊಳ್ಳಬಹುದು. ಈಗ ನಮ್ಮ ಮುಂದಿರುವ ಪ್ರಶ್ನೆಯೆಂದರೆ, ಸೈಂಟಿಸ್ಟ್ ಅನ್ನು ಹೊಡೆದರು. ಚೈನಾ ಪ್ರಧಾನಮಂತ್ರಿ ಬಂದಾಗ ಬಾವುಟ ಹಾರಿಸಿದರು. ಆಗೆಲ್ಲಾ ನಮ್ಮವರು ಯಾರೂ ಏನೂ ಮಾಡಲಿಲ್ಲವೆಂದರೆ ನಾವು ಅವರನ್ನು ಟ್ರೈನೇ ಮಾಡಿಲ್ಲ. ನನ್ನದು ಒಂದೇ ಒಂದು ಸಜೆಷನ್ ಎಂದರೆ, ಪೊಲೀಸಿನವರನ್ನು ಬಿಟ್ಟು, ನೀವು ಹೊಸ ಪಡೆಯನ್ನು ಸೆಕ್ಯುರಿಟಿ ಅರೇಂಜ್‌ಮೆಂಟ್ಸ್‌ಗೆ, ಇಂಟೆಲಿಜೆನ್ಸ್‌ಗಾಗಿ ನಿರ್ಮಾಣ ಮಾಡಬೇಕಾಗುತ್ತದೆ. ಅವರು ಕಂಪಲ್ಸರಿಯಾಗಿ ಅಲ್ಲಿ ಐದು ವರ್ಷವೋ, ಹತ್ತು ವರ್ಷವೋ ಕೆಲಸ ಮಾಡಿದ ಮೇಲೆ ರೆಗ್ಯುಲರ್ ಪೊಲೀಸ್ ಫೋರ್ಸ್‌ಗೆ ಅವರ ಸರ್ವೀಸ್ ಅನ್ನು ಕೌಂಟ್ ಮಾಡಿಕೊಂಡು ವರ್ಗ ಮಾಡಬೇಕಾಗುತ್ತದೆ. ಅವರಿಗೆ ವಿಶೇಷವಾದ ಭತ್ಯೆಯನ್ನೇನಾದರೂ ಕೊಡಬೇಕಾಗುತ್ತದೆ. ಅವರ ಮನೆಯವರಿಗೆ ಸೆಕ್ಯುರಿಟಿ ಇದೆ ಎನ್ನುವ ರೀತಿಯಲ್ಲಿ ಏನಾದರೊಂದು ಗ್ಯಾರಂಟಿ ಮಾಡಬೇಕಾಗುತ್ತದೆ. ಸ್ಪೆಷಲ್ ಟಾಸ್ಕ್‌ಫೋರ್ಸನ್ನು ಕ್ರಿಯೇಟ್ ಮಾಡಿ ಅವರಿಗೆ ಅನುಕೂಲಗಳನ್ನು ಸೃಷ್ಟಿ ಮಾಡುತ್ತೇವೆಂದು ಹೇಳಿದಿರಿ. ಹಾಗೆಯೇ, ಸೆಕ್ಯುರಿಟಿ ಅರೇಂಜ್ ಮೆಂಟ್ಸ್‌ನಲ್ಲೂ ಮಾಡಬೇಕಾಗುತ್ತದೆ. ಐ ಎಸ್ ಐ, ಐ ಎಸ್ ಐ ಎಂದು ನಾವು ಬೆಳಿಗ್ಗೆಯಿಂದ ಮಾತನಾಡುತ್ತಿದ್ದೇವೆ. Inter-Services Intelligence, it is not an activist group. ಅವರು ಪಾಕಿಸ್ತಾನದ ಡಿಫೆನ್ಸ್ ಕೆಳಗಡೆ ಏಜೆನ್ಸಿ ಇಟ್ಟಿದ್ದನ್ನು ಪಾಲಿಟಿಕ್ಸ್‌ಗೆ ಬಳಕೆ ಮಾಡಲು ಶುರುಮಾಡಿ ಈಗ ಎಲ್ಲಾ ಕಡೆ ಅಲ್ಲಿ, ಇಲ್ಲಿ ಏನಾದರೂ ಬೀಜ ಹಾಕಿಬಿಟ್ಟು ಎಲ್ಲಾದರೂ ಗಲಭೆ ಮಾಡಲಿಕ್ಕಾಗುತ್ತದೆಯೇ ಎಂದು ಪ್ರಯೋಗ ಮಾಡಲಿಕ್ಕೆ ಬಂದು ಐ ಎಸ್ ಐ ಅನ್ನು ಇವತ್ತು ನಾವು ದೂಷಣೆ ಮಾಡುವಂಥ ಸ್ಥಿತಿಗೆ ಬಂದಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳೇ, ಅವರು ಬಹಳ ಮಾಡುವುದಿಲ್ಲ. ಯಾರನ್ನಾದರೊಬ್ಬರನ್ನು ಹುಟ್ಟಿ ಹಾಕುತ್ತಾರೆ. ಅವನ ತಲೆಯಲ್ಲಿ ಭಾರಿಯಾಗಿ ದೇಶದ್ದೋ, ಧರ್ಮದ್ದೋ ಬೀಜವನ್ನು ಹುಟ್ಟಿ ಹಾಕುತ್ತಾರೆ. ನಾನೊಂದು ಪವಿತ್ರವಾದ ಕೆಲಸ ಮಾಡುತ್ತಿದ್ದೇನೆ ಎನ್ನುವ ಭಾವನೆ ಬಂದಾಗ ಅವನು ಏನು ಬೇಕಾದರೂ ಮಾಡುವುದಕ್ಕೆ ರೆಡಿಯಾಗುತ್ತಾನೆ. ಬೆಂಗಳೂರು ಸ್ಟ್ರಾಟೆಜಿಕ್ ಪಾಯಿಂಟ್‌ನಲ್ಲಿದೆ. ಇಲ್ಲಿಂದ ಯಾರು ಬೇಕಾದರೂ, ಯಾವ ರಾಜ್ಯಕ್ಕೆ ಬೇಕಾದರೂ ತಕ್ಷಣ ಹೋಗಬಹುದು. ಬೇರೆ ಕಡೆಗಳಲ್ಲಿ ಹಾಗೆ ಆಗುವುದಿಲ್ಲ. ತಮಿಳುನಾಡಿಗೆ ಜಂಪ್ ಆಗಬಹುದು. ಪಾಂಡಿಚೆರಿಗೆ ಹೋಗಬಹುದು, ಕೇರಳಕ್ಕೆ ಹೋಗಬಹುದು, ಆಂಧ್ರಕ್ಕೆ ಹೋಗಬಹುದು, ನಮ್ಮ ಪೊಲೀಸಿನವರನ್ನು

ದಾಟಿ ತಕ್ಷಣ ಅವರು ಆಚೆಗೆ ಹೋಗಬಹುದು. ನೀವು ಬೇರೆ ರಾಜ್ಯದ ಪೊಲೀಸರನ್ನು ಜೊತೆಗೆ ಸೇರಿಸಿಕೊಂಡು, ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಹೊತ್ತಿಗೆ ಅವರು ಹೊರಟು ಹೋಗಿರುತ್ತಾರೆ. ಮೊದಲು, ಕಳ್ಳ ಎಂದರೆ ಒಂದು ಕಲ್ಪನೆ ಇರುತ್ತಿತ್ತು. ಚಿಂದಿಬಟ್ಟೆಯಲ್ಲಿ ಬರುತ್ತಾನೆ, ಗಡ್ಡಬಿಟ್ಟಿರುತ್ತಾನೆ, ಗತಿ ಇಲ್ಲದವನ ಹಾಗೆ ಬರುತ್ತಾನೆ, ಅವನು ಕದಿಯಬಹುದೇ ಎಂದು ಪೊಲೀಸಿನವರು ನೋಡುತ್ತಿದ್ದರು. ಈಗ ಅವನೂ ನಮ್ಮ ನಿಮ್ಮ ಹಾಗೆಯೇ ಒಂದು ಒಳ್ಳೆಯ ಕಾರಿನಲ್ಲಿ ಬರುತ್ತಾನೆ, ಸೂಟ್‌ನಲ್ಲಿ ಬರುತ್ತಾನೆ, ಸ್ನಾಚ್ ಮಾಡಿಬಿಟ್ಟು ಕೋಟಿನ ಜೇಬಿಗೆ ಹಾಕಿಕೊಂಡು ಜೋರಾಗಿ ಕಾರಿನಲ್ಲಿ ಹೋಗುತ್ತಿರುತ್ತಾನೆ. ಕೇಳುವುದಕ್ಕೆ ಹೋದರೆ ಅವನು ಮರ್ಯಾದಸ್ಥನ ಹಾಗೆ ಕಾಣುತ್ತಾನೆ. ಆದರೆ ಇಂಥ ಕೆಲಸವನ್ನು ಮಾಡುತ್ತಿರುತ್ತಾನೆ. ಇದನ್ನೂ ನಾವು ಯೋಚನೆ ಮಾಡಬೇಕು. ಇವತ್ತು ನಾವು ನಿರೀಕ್ಷೆ ಮಾಡಿದ ಹಾಗೆ ಕಳ್ಳರು ಬಸ್‌ಸ್ಟ್ಯಾಂಡಿನಲ್ಲಿ, ಸರ್ಕಲ್‌ನಲ್ಲಿ ಗತಿ ಇಲ್ಲದ ಹಾಗೆ ನಿಂತುಕೊಂಡು ಕಳ್ಳತನ ಮಾಡತಕ್ಕಂಥ ಕಳ್ಳರು ಇಲ್ಲ. ಚೆನ್ನಾಗಿ ಕಾಣಿಸಿಕೊಂಡು ಕಳ್ಳತನ ಮಾಡುವವರೇ ಜಾಸ್ತಿ ಇದ್ದಾರೆ. ಅಂಥವರ ಬಗ್ಗೆ ನಾವು ಹುಷಾರಾಗಿರಬೇಕೆಂದರೆ, ನಿಮಗೆ ಆಂತರಿಕವಾಗಿ ಸುದ್ಧಿ ಕೊಡುವಂಥ ಬೇಹುಗಾರಿಕೆ ವ್ಯವಸ್ಥೆಯನ್ನು ತಕ್ಷಣವೇ ತಾವು ಮಾಡಬೇಕು. ಬೆಂಗಳೂರು ಮಾತ್ರವಲ್ಲ. ಎಲ್ಲೆಲ್ಲಿ ಹೆಚ್ಚು ಬಂಡವಾಳ ಹೂಡಿಕೆ ಶುರುವಾಗುತ್ತದೆಯೋ ಅಲ್ಲೆಲ್ಲ ಎರಡು ರೀತಿಯ ತೊಂದರೆಗಳು ಪ್ರಾರಂಭವಾಗುತ್ತವೆ. ಒಂದು ಹೊರಗಡೆಯವರು ಬರುವುದು, ಇನ್ನೊಂದು ನಮ್ಮವರೇ ನಕ್ಸಲೈಟ್‌ಗಳಾಗಿ ಕನ್‌ವರ್ಟ್ ಆಗುತ್ತಾ ಹೋಗುವುದು. ಮೈನಿಂಗ್ ಏರಿಯಾಗಳಲ್ಲಿ, ಹಣ ಇರುವ ಕಡೆಗಳಲ್ಲಿ ನೀವು ಈಗಲೇ ಜಾಗರೂಕರಾಗದೇ ಹೋದರೆ ಮುಂದೆ ನಾವು ಗಂಡಾಂತರಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ. ಪಾವಗಡದಲ್ಲೇನು ಭಾರೀ ಶ್ರೀಮಂತರಿರಲಿಲ್ಲ. ಒಂದು ಕಾಲದಲ್ಲಿ ಅಲ್ಲಿನ ಗುಡ್ಡಗಳಲ್ಲಿ ರತ್ನವೋ, ಮುತ್ತೋ ಸಿಗುತ್ತದೆ ಎಂದು ಸುದ್ದಿಯಾಗಿಬಿಟ್ಟಿತ್ತು. ಇದ್ದಬಿದ್ದವರೆಲ್ಲ ಗುಡ್ಡದ ಹಿಂದೆ ಬಿದ್ದರು. ಅದು ಇರುವಷ್ಟು ದಿನ ಹೋಯಿತು. ಆಮೇಲೆ ಅಲ್ಲಿರುವವರೆಲ್ಲಾ ಆ ಬಂಡೆ ಮಧ್ಯೆ ಸೇರಿಕೊಂಡು ನಕ್ಸಲೈಟ್ಸ್ ಆಗಿಬಿಟ್ಟರು. ನಮ್ಮ ಎದುರಿಗಿದ್ದ ಹುಡುರನ್ನೆಲ್ಲಾ ನಕ್ಸಲೈಟ್, ನಕ್ಸಲೈಟ್ ಎಂದು ಹೆಸರಿಡುವ ಸ್ಥಿತಿ ಬಂದಿತಲ್ಲಾ ಎಂದರೆ, ಏನು ಬೇಕಾದರೂ ಮಾಡುವಂಥ ಅನಿವಾರ್ಯ ಪರಿಸ್ಥಿತಿಗೆ ಅವರು ಬಂದುಬಿಟ್ಟರು. ಆ ಸ್ಥಿತಿಗೆ ಬರುವುದಕ್ಕೆ ಮೊದಲೇ ತಾವು ಎಚ್ಚರವಹಿಸಿಬಿಟ್ಟು ಎಲ್ಲೆಲ್ಲಿ ಸ್ಟ್ರಾಟ್‌ಜಿ ಪಾಯಿಂಟ್ಸ್ ಇದೆ. ಅಲ್ಲೆಲ್ಲಾ ಬೇಹುಗಾರಿಕೆ ವ್ಯವಸ್ಥೆಯನ್ನು ತಾವು ಸರಿಮಾಡಿಕೊಳ್ಳಬೇಕು. ಇದಕ್ಕೆ ಹಣ ಖರ್ಚಾಗುತ್ತದೆ. ಈ ರಾಜ್ಯದ ಹಿತದೃಷ್ಟಿಯಿಂದ ಖರ್ಚಾದರೆ ಆಗಲಿ.

ಶ್ರೀ ವಾಟಾಳ್ ನಾಗರಾಜ್ : ಬೇಹುಗಾರಿಕೆ ವ್ಯವಸ್ಥೆ ಸರಿ ಇದ್ದಿದ್ದರೆ, ಧರಂಸಿಂಗ್‌ರವರ ಸರ್ಕಾರ ಹೋಗುತ್ತಲೇ ಇರಲಿಲ್ಲ. ಕುಮಾರಸ್ವಾಮಿಯವರು, ಯಡಿಯೂರಪ್ಪನವರು ಯಾವಾಗ, ಎಲ್ಲಿ ಸೇರುತ್ತಾರೆಂದು ಇವರಿಗೆ ಗೊತ್ತೇ ಆಗಲಿಲ್ಲ. ಗೊತ್ತಿದ್ದರೆ ಅವರ ಸರ್ಕಾರ ಉಳಿಯುತ್ತಿತ್ತು. ಬೇಹುಗಾರಿಕೆ ಅಲ್ಲಿ ವಿಫಲವಾಗಿಬಿಟ್ಟಿತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸನ್ಮಾನ್ಯ ಮುಖ್ಯಮಂತ್ರಿಗಳು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ರಾಜ್ಯದ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಘಟನೆಯಾಗುವುದಕ್ಕೂ ಮೊದಲು ಬೆಂಗಳೂರಿನಲ್ಲಿ ಶಿವರಾಸನ್ ಬಂದು ಅಡಗಿದಾಗಿನಿಂದ ಪೊಲೀಸಿನವರು ಇಲ್ಲಿ ಫೈಲ್ ಆದರು. ಇಂಟೆಲಿಜೆನ್ಸ್ ಫೈಲ್ ಆಯಿತು ಎಂದು ಮೊದಲನೆಯದಾಗಿ ಹೇಳಲಿಕ್ಕೆ ನಾನು ಇಚ್ಚೆಪಡುತ್ತೇನೆ. ಅವತ್ತೇ ಎಚ್ಚೆತ್ತುಕೊಂಡಿದ್ದರೆ, ಅಪರಾಧಿಗಳು, ಭಯೋತ್ಪಾದಕರು ಇವತ್ತು ನಮ್ಮ ಬೆಂಗಳೂರಿನಲ್ಲಿ ಇರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವತ್ತು ಶಿವರಾಸನ್‌ನಂಥವರು ಇಲ್ಲಿಗೆ ಬಂದು ಮನೆ ಮಾಡಿಕೊಂಡು ಇಲ್ಲಿ 2–3 ತಿಂಗಳು ಉಳಿಯಬೇಕಾದರೆ ಆವತ್ತಿನ ದಿನಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ಇಲ್ಲಿ ನಮ್ಮ ಇಂಟಲಿಜೆನ್ಸ್ ಪೂರ್ತಿಯಾಗಿ ಫೈಲ್ ಆಗಿದೆ. ಸಿ.ಓ.ಡಿ.ಗೆ ಎಂಥವರನ್ನು ಹಾಕುತ್ತಾರೆ. ಲೋಕಾಯುಕ್ತಕ್ಕೆ ಎಂಥವರನ್ನು ಹಾಕುತ್ತಾರೆ ಎಂದು ಆಗಲೇ ಹೇಳುತ್ತಿದ್ದರು. ಅದರ ಜೊತೆಗೆ, ಪೊಲಿಟಿಕಲ್ ಇನ್‌ಫ್ಲೂಯೆನ್ಸ್ ಇಲ್ಲದವರನ್ನೂ ಅಲ್ಲಿಗೆ ಹಾಕುತ್ತಾರೆ. ಅದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಡಾ: ರಾಜಕುಮಾರ್‌ರವರನ್ನು ವೀರಪ್ಪನ್ ಕಿಡ್ನಾಪ್ ಮಾಡುತ್ತಾರೆ ಎಂದು ಒಬ್ಬರು ರಿಪೋರ್ಟ್ ಕೊಟ್ಟಿದ್ದರು. ಅವರು ಯಾರೆಂದು, ಅವರ ಹೆಸರನ್ನು ಮರೆತಿದ್ದೇನೆ. ಅವರು ನಮ್ಮ ರಾಜ್ಯದವರಲ್ಲ. ಪೊಲೀಸ್ ಡಿಪಾರ್ಟ್‌ಮೆಂಟಿಗೆ ಸೇರಿದ ಅವರು ಬೇರೆ ರಾಜ್ಯದವರು. ಅವರು ಇಲ್ಲಿಗೆ ಬಂದು ರಾಜಕುಮಾರ್‌ರವರನ್ನು ಕಿಡ್ನ್ಯಾಪ್ ಮಾಡುತ್ತಾರೆ ಎನ್ನುವ ರಿಪೋರ್ಟ್‌ನ್ನು ಕೊಟ್ಟುಹೋದರು. ಅಷ್ಟಾದರೂ ಕೂಡ ನಮ್ಮ ಪೊಲೀಸ್ ವ್ಯವಸ್ಥೆ ಎಚ್ಚೆತ್ತುಕೊಳ್ಳಲಿಲ್ಲ. ಇಂಟೆಲಿಜೆನ್ಸ್ ಏನಿದೆ, ಇದೂ ಕೂಡ ಪೂರ್ತಿ ರಾಜಕೀಯವಾಗಿಬಿಟ್ಟಿದೆ. ಯಾರು ನನಗೆ ಹತ್ತಿರ ಬೇಕೋ, ಅಂಥವರನ್ನು ಇಂಟೆಲಿಜೆನ್ಸ್‌ಗೆ ತೆಗೆದುಕೊಳ್ಳುವ ವ್ಯವಸ್ಥೆಗೆ ಹೋಗಿದೆ ಎನ್ನುವುದು ನನ್ನ ಅನಿಸಿಕೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ, ರಾಜಕುಮಾರ್‌ರವರನ್ನು ಕಿಡ್ನ್ಯಾಪ್ ಮಾಡುತ್ತಾರೆ ಎಂದು ರಿಪೋರ್ಟ್ ಕೊಟ್ಟಂಥವರನ್ನು, ಅಂಥ ಇಂಟೆಲಿಜೆನ್ಸ್ ಇರುವವರನ್ನು, ಅವರು ಯಾವ ರಾಜ್ಯದಲ್ಲಿದ್ದರೂ ಪರವಾಗಿಲ್ಲ. ಅಂಥವರನ್ನು ಹುಡುಕಿ ಡೆಪ್ಯುಟೇಷನ್ ಮೇಲೆ ಹಾಕಿಸಿಕೊಳ್ಳಿ. ಅವತ್ತು ಭಯೋತ್ಪಾದನೆ, ಟೆರರಿಸಂ ಇಂಥವುಗಳೆಲ್ಲಾ ನಿಲ್ಲುತ್ತವೆ ಎನ್ನುವಂಥಾದ್ದು ನನ್ನ ಅನಿಸಿಕೆ. ಈ ಬಗ್ಗೆ ನೀವು ಯಾವುದೇ ಮುಲಾಜು ನೋಡಬೇಡಿ. ಬೆಂಗಳೂರಿನಲ್ಲಿ ಐ.ಟಿ., ಬಿ.ಟಿ. ಇನ್ನೂ ಬೆಳೆಯಬೇಕಾಗಿದೆ. ಇಲ್ಲಿರುವವರಿಗೂ ಕೂಡ ನಾವು ರಕ್ಷಣೆ ಕೊಡಬೇಕಾಗುತ್ತದೆ. ಇದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ಕಡೆ ಒಂದು ಸಣ್ಣ ಹಳ್ಳಿಯಲ್ಲಿ ಉಗ್ರಗಾಮಿ ಸಿಕ್ಕಿದ್ದಾನೆ. ವರ್ಷಗಟ್ಟಲೇ ಇದ್ದನು. ಈಗ ಅದು ಗೊತ್ತಾಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿನ ಸಭೆಯ ಸಂದರ್ಭದಲ್ಲಿ ಆಗಿರತಕ್ಕಂಥ ಘಟನೆಯ ಬಗ್ಗೆ ಈ ಸದನದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯನ್ನು ಮಾಡಿದ್ದು, ನಮ್ಮ ಎಲ್ಲ ಹಿರಿಯ ಸದಸ್ಯರುಗಳು ಪೊಲೀಸ್ ಇಲಾಖೆಯನ್ನು ಸದೃಢಗೊಳಿಸತಕ್ಕಂಥಾದ್ದು ಮತ್ತು ಬೇಹುಗಾರಿಕೆ ಸಂಸ್ಥೆ ಅತ್ಯುತ್ತಮವಾಗಿ ಕೆಲಸ ಮಾಡತಕ್ಕಂಥಾದ್ದಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದ್ದು, ಆ ಸಲಹೆಗಳನ್ನು ನಾನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ. ಅದರಲ್ಲೂ, ಹಿರಿಯ ಸದಸ್ಯರುಗಳಾದ ಶ್ರೀರಾಮರೆಡ್ಡಿಯವರು, ಮಾಧುಸ್ವಾಮಿಯವರು ಏನು ಚರ್ಚೆಯನ್ನು ಮಾಡಿದ್ದಾರೆ. ಆ ಬಗ್ಗೆ ಈ ಸಂದರ್ಭದಲ್ಲಿ ಒಂದನ್ನು ನಾನು ಹೇಳಲು ಬಯಸುವಂಥಾದ್ದು ಕೇಂದ್ರ ಸರ್ಕಾರ ಆ ಸಂದರ್ಭದಲ್ಲಿ ಮಾಹಿತಿಯನ್ನು ಕೊಟ್ಟಿತ್ತು ಎಂದು ಏನು ಹೇಳುತ್ತಿದ್ದಾರೆ. ಅದು ಪರ್ಟಿಕ್ಯುಲರ್ ಆಗಿ ಅದೇ ಪ್ಲೇಸ್‌ನಲ್ಲಿ ಆಗುತ್ತದೆ ಎಂದು ಕೊಟ್ಟಂಥ ಮಾಹಿತಿಯಲ್ಲ ಅದು. ಬೆಂಗಳೂರು ನಗರದಲ್ಲಿ ಈ ರೀತಿಯ ಭಯೋತ್ಪಾದನೆ ಚಟುವಟಿಕೆಗಳಿಗೆ ಕೆಲವರು ಉತ್ತೇಜನ ಕೊಡುತ್ತಿದ್ದಾರೆನ್ನುವ ಮಾಹಿತಿಯನ್ನು ಸರ್ಕಾರಕ್ಕೆ ಕೊಟ್ಟಿದ್ದರೆಂದು ಏನು ಹೇಳುತ್ತಾರೆ, ಆ ಒಂದು ಘಟನೆ ಆ ಸ್ಥಳದಲ್ಲಿ ನಡೆಯುತ್ತದೆ ಎನ್ನುವುದನ್ನು particular ಆಗಿ ಯಾವುದೇ ರೀತಿಯ ಮಾಹಿತಿಯನ್ನು ಕೊಟ್ಟಿರಲಿಲ್ಲ. ಈ ದೇಶದಲ್ಲಿ ನಾವು ಸರ್ಕಾರದಿಂದ ಎಲ್ಲಾ ರೀತಿಯ ರಕ್ಷಣೆಯನ್ನು ಕೊಡತಕ್ಕಂಥ ಕ್ರಮವನ್ನು ತೆಗೆದುಕೊಂಡಾಗಲೂ ಕೂಡ, ಈ ದೇಶದ ಹಲವಾರು ಭಾಗಗಳಲ್ಲಿ ಹಲವಾರು ಘಟನೆಗಳು ಪದೇ ಪದೇ ಇಂಥ ಒಂದು ಸನ್ನಿವೇಶಗಳು ಆಗುತ್ತಾ ಇದ್ದಾವೆ, ಬೆಂಗಳೂರು ನಗರ ಇವತ್ತು ಇಡೀ ವಿಶ್ವದಲ್ಲಿಯೇ ಹೆಸರನ್ನು ಗಳಿಸತಕ್ಕಂಥ ಸನ್ನಿವೇಶದಲ್ಲಿ ಬೆಂಗಳೂರು ನಗರ ಇವತ್ತು ಪ್ರತಿಯೊಬ್ಬರ ಗಮನದಲ್ಲಿ ಕೇಂದ್ರ ಸ್ಥಾನ ಆಗಿರತಕ್ಕಂಥ ಸಂದರ್ಭದಲ್ಲಿ, ಪೊಲೀಸ್ ಇಲಾಖೆಯವರು ಹೆಚ್ಚಿನ ಕೆಲಸವನ್ನು ಮಾಡತಕ್ಕಂಥದ್ದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಅವರಿಗೆ ವಿಶೇಷವಾದ ತರಬೇತಿಯನ್ನು ಕೊಡಬೇಕಾಗಿದೆ. ಈ ಬೇಹುಗಾರಿಕೆ ವಿಷಯದಲ್ಲಿ ತಾವೇನು ನನ್ನ ಗಮನಕ್ಕೆ ತಂದಿದ್ದೀರಾ, ಅದರ ಬಗ್ಗೆ ಹೆಚ್ಚಿನ ಗಮನ ಹರಿಸಿ ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆಗಳು ಆಗದೇ ಇರತಕ್ಕಂಥದ್ದಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಬಯಸುತ್ತೇನೆ. ಅದರ ಜೊತೆಗೆ ಈ ಒಂದು ಘಟನೆ ಆದ ನಂತರ ಬೆಂಗಳೂರು ನಗರದಲ್ಲಿ ನಡೆಯುವ ಗಣ್ಯರ ಸಭೆಗಳಿರಬಹುದು, ಅಂಥ ಒಂದು ಸಂದರ್ಭದಲ್ಲಿ ಯಾವ ರೀತಿಯಾಗಿ ಪೊಲೀಸ್ ಇಲಾಖೆಯವರು ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ ಎನ್ನುವುದಕ್ಕೆ ಈಗಾಗಲೇ ಪೊಲೀಸ್ ಇಲಾಖೆಯವರು ಕ್ರಮವನ್ನು ತೆಗೆದುಕೊಂಡಿದ್ದಾರೆ. ಈಗ ಪ್ರತಿಯೊಂದು ಈ ರೀತಿಯ ಸಂಸ್ಥೆಗಳಲ್ಲಿ ಸಭೆಗಳು ನಡೆಯತಕ್ಕಂಥ ಸಂದರ್ಭದಲ್ಲಿ ಈಗಾಗಲೇ ಪ್ರಮುಖರ ಜೊತೆಯಲ್ಲಿ ಚರ್ಚೆಯನ್ನು ಮಾಡಿ, ಅಲ್ಲಿ ಮುಂದಿನ ದಿನಗಳಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ, ಅದಕ್ಕೆ ಗಮನಹರಿಸಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಸದನದ ಗಮನಕ್ಕೆ ತರಲಿಕ್ಕೆ

ಬಯಸುತ್ತೇನೆ. ಇವತ್ತು ಸದನದಲ್ಲಿ ಸದಸ್ಯರುಗಳಾದ ತಾವು ಹೇಳಿರತಕ್ಕಂಥ ಸಲಹೆಗಳನ್ನು ಸ್ವೀಕರಿಸಿ ಮುಂದೆ ಈ ರೀತಿಯ ಘಟನೆಗಳು ಮರುಕಳಿಸದೆ ಇರತಕ್ಕಂಥದ್ದಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುವುದರ ಮುಖಾಂತರ, ಹಲವಾರು ದೇಶಗಳಿಂದ ಬಂಡವಾಳವನ್ನು ಹೂಡತಕ್ಕಂಥವರು ಬೆಂಗಳೂರು ನಗರಕ್ಕೆ ಬರತಕ್ಕಂಥ ವ್ಯವಸ್ಥೆ ಏನಿದೆ, ಬೆಂಗಳೂರು ನಗರದ ಬಗ್ಗೆ ವಿದೇಶದ ಗಣ್ಯರಿಗೆ ಕುತೂಹಲ ಇದೆ, ಇಲ್ಲಿ ಒಂದು ಆಕರ್ಷಣೆ ಇರತಕ್ಕಂಥ ಈ ಒಂದು ಸನ್ನಿವೇಶದಲ್ಲಿ, ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆಯನ್ನು ಉತ್ತಮ ಪಡಿಸತಕ್ಕಂಥದ್ದಕ್ಕೆ, ಅವರ ಕಾರ್ಯನಿರ್ವಹಣೆಯನ್ನು ಸರಿಯಾದ ರೀತಿಯಲ್ಲಿ ಮಾಡತಕ್ಕಂಥದ್ದಕ್ಕೆ ಗಮನಹರಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ಈ ದಿನಾಂಕ: 6ನೇ ಏಪ್ರಿಲ್ 2006 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ವಿಧೇಯಕ, 2006.
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕ, 2006.
3. ಮೈಸೂರು ಕಾರ್ಮಿಕ ಮತ್ತು ಧರ್ಮಾದಾಯ ಇನಾಂಗಳ ರದ್ಧತಿ ಕರ್ನಾಟಕ (ತಿದ್ದುಪಡಿ) 2005.
4. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2006.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು ನಿಯಮ 345ರ ಪ್ರಕಾರ Houseನಲ್ಲಿ ಒಂದು statement ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅರ್ಧ ಗಂಟೆ ಕಾಲಾವಧಿ ಚರ್ಚೆ ರಾಜ್ಯದ ನೀರಾವರಿ ಬಗ್ಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಬಹಳ ಸಮಯ ಆಗಿದೆ.

14. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಧರಂಸಿಂಗ್‌ರವರು ಬಜೆಟ್ ಮೇಲಿನ ಚರ್ಚೆಯಲ್ಲಿ ಸರ್ಕಾರದ ಬಗ್ಗೆ ವಿಶೇಷವಾದ ಗಮನವನ್ನು ಸೆಳೆಯುವುದರ ಜೊತೆಗೆ ನನಗೆ ಪದೇ ಪದೇ